UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Monday
29-06-2026

ಜಿಕೆವಿಕೆ, ಎಂಜಿನೀಯರ್ ವಿಶ್ವನಾಥ್, ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಕೆಂಪೇಗೌಡ ಪ್ರಶಸ್ತಿ

ಕೆಂಪೇಗೌಡರ ಜಯಂತಿ ಅದ್ಧೂರಿ ಆಚರಣೆ

ಬೆಂಗಳೂರು: ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ, ದಾಖಲೆಯಿತ 15 ಲಕ್ಷ ಸಸಿಗಳ ನೆಡುವಿಕೆ, ಎಸ್.ಎಂ.ಕೃಷ್ಣ ದಶಪಥ ರಸ್ತೆ, 10ಕೆ ರನ್, 5 ಕೆ ವಾಕಥಾನ್, ಅಂತಾರಾಷ್ಟ್ರೀಯ ಸಾಧಕರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ ಹೀಗೆ ಸಾಲು ಸಾಲು ಕಾರ್ಯಕ್ರಮಗಳ ಮೂಲಕ 517ನೇ ವರ್ಷದ ಕೆಂಪೇಗೌಡ ಜಯಂತಿಯನ್ನು ಆತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು.

ಬೆಂಗಳೂರು ನಿರ್ಮಿಸಿದ, ಪೇಟೆಗಳನ್ನು ಕಟ್ಟಿದ, ಕೆರೆಗಳನ್ನು ನಿರ್ಮಿಸಿ ಹೊಸ ಚರಿತ್ರೆ ಸೃಷ್ಟಿಸಿದ, ದೂರದೃಷ್ಟಿಯ ಮಣ್ಣಿನ ಮಗ ಕಲಿವೀರ ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ದೇವನಹಳ್ಳಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಕಂಚಿನ ಪ್ರತಿಮೆಗೆ ಮೊದಲಿಗೆ ಪುಷ್ಪಾರ್ಚನೆ ಮಾಡಿದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜಯಂತಿಗೆ ಚಾಲನೆ ನೀಡಿದರು.

ಬೃಹತ್ ಪ್ರತಿಮೆಯ ಪಾದವನ್ನು ಮುಟ್ಟಿ ನಮಸ್ಕರಿಸಿದ ಮುಖ್ಯಮಂತ್ರಿ ಯವರು ಪ್ರತಿಮೆಯ ಪಾದಗಳಿಗೆ ಭಕ್ತಿಯಿಂದ ಪುಷ್ಪಾರ್ಚನೆ ಮಾಡಿ ನಮಿಸಿದರು. ನಂತರ ಪ್ರತಿಮೆಯ ಹಕ್ಕದಲ್ಲಿ ನಿರ್ಮಾಣ ಮಾಡಿರುವ ಥೀಮ್ ಪಾರ್ಕ್ ಅನ್ನು ವೀಕ್ಷಿಸಿದರು.

ಇದಾದ ಬಳಿಕ ಬೆಂಗಳೂರು ಉತ್ತರ ಯಲಹಂಕ ಒಕ್ಕಲಿಗರ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಆನಂತರ ವೇದಿಕೆ ಕಾರ್ಯಕ್ರಮದಲ್ಲಿ ಒಕ್ಕಲಿಗರ ಸಂಘಕ್ಕೆ ರಿಯಾಯಿತಿ ದರದಲ್ಲಿ ಕೆಂಚೆಬ ನಿವೇಶನ ನೀಡುವುದಾಗಿ ಘೋಷಣೆ ಮಾಡಿದರು. ನಂತರ ವಿಧಾನಸೌಧದ ಮುಂದಿರುವ ಕುದುರೆಯ ಮೇಲೆ ವಿರಾಜಮಾನ ರಾಗಿರುವ ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಿದರು.

ಗಮನ ಸೆಳೆದ ವಾಲ್ ಆಫ್ ಗ್ಯಾಟಿಟ್ಯೂಡ್! ಎಸ್.ಎಂ.ಕೃಷ್ಣ ರಸ್ತೆ (ಬೆಂಗಳೂರು-ಮೈಸೂರು ದಶಪಥ ರಸ್ತೆ) ಅಭಿವೃದ್ಧಿಗಾಗಿ ಯಾವುದೇ ವಿವಾದವಿಲ್ಲದೆ ಸ್ವಯಂಪ್ರೇರಿತವಾಗಿ ತಮ್ಮ ಭೂಮಿಯನ್ನು ಬಿಟ್ಟುಕೊಟ್ಟ ರೈತರು ಮತ್ತು ಸ್ಥಳೀಯರನ್ನು ಗೌರವಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 'ವಾಲ್ ಆಫ್ ಗ್ಯಾಟಿಟ್ಯೂಡ್ (ಕೃತಜ್ಞತಾ ಫಲಕ) ನಿರ್ಮಿಸಿದೆ. ಮೈಸೂರು ರಸ್ತೆಯಲ್ಲಿರುವ ಈ ವಿಶೇಷ ಗೋಡೆಯು ರೈತರ ತ್ಯಾಗವನ್ನು ಸ್ಮರಿಸುತ್ತದೆ. ರಸ್ತೆ ಉದ್ಘಾಟನೆ ನಂತರ ಈ ಫಲಕವನ್ನು ಸಿಎಂ ಗಣ್ಯರ ಜೊತೆಗೂಡಿ ಲೋಕಾರ್ಪಣೆ ಮಾಡಿದರು. ಇದು ಎಲ್ಲರ ಗಮನ ಸೆಳೆಯಿತು.

ತದ ನಂತರ ಚಲ್ಲಘಟ್ಟದ ನಾಡಪ್ರಭು ಕೆಂಪೇಗೌಡ ಬಡಾವಣೆ ಬಳಿ ಎಸ್.ಎಂ.ಕೃಷ್ಣ ದಶಪಥ ರಸ್ತೆಯ ಬಳಿ ಬೆಂಗಳೂರಿನ ನಾಲ್ಕು ದಿಕ್ಕುಗಳಿಂದಲೂ ಸಚಿವರುಗಳ ನೇತೃತ್ವದಲ್ಲಿ ತಂದಂತಹ ಪುರಜ್ಯೋತಿಗಳನ್ನು ಡಿ.ಕೆ.ಶಿವಕುಮಾರ್ ಸ್ವೀಕರಿಸಿದರು. ನಂತರ ಕೆಂಪೇಗೌಡರ ಕೋಟೆಯ ಪ್ರತಿಕೃತಿ ಎದುರು ಎಲ್ಲ ಪುರಜ್ಯೋತಿಗಳನ್ನು ಇಡಲಾಯಿತು.

ಇದಕ್ಕೂ ಮೊದಲು ಚಲ್ಲಘಟ್ಟದ ನಾಡಪ್ರಭು ಕೆಂಪೇಗೌಡ ಬಡಾವಣೆ ಬಳಿ ಎಸ್.ಎಂ.ಕೃಷ್ಣ ದಶಪಥ ರಸ್ತೆಯಲ್ಲಿ 10 ಕೆ ರನ್, 5 ಕೆ ವಾಕಥಾನ್ ಏರ್ಪಡಿಸಲಾಗಿತ್ತು. ಸಾವಿರಾರು ಜನರು ನೂತನ ರಸ್ತೆಯಲ್ಲಿ ಓಡಿ ಸಂಭ್ರಮಪಟ್ಟರು. ಈ ರಸ್ತೆ ಅಂತರರಾಷ್ಟ್ರೀಯ ಗುಣಮಟ್ಟದಿಂದ ಕೂಡಿದೆ ಎಂದು ಅಭಿಪ್ರಾಯ ಹಂಚಿಕೊಂಡರು. ಆನಂತರ ಶ್ರೀಮತಿ ಪ್ರೇಮಾ ಕೃಷ್ಣ ಅವರು ಹಾಗೂ ಸಂಪುಟ ಸಹೋದ್ಯೋಗಿಗಳು, ಪರಿಷತ್ ಸದಸ್ಯರ ಜತೆಗೂಡಿ ನೂತನ ರಸ್ತೆಯನ್ನು ಉದ್ಘಾಟಿಸಿದರು.



ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಜಿಕೆವಿಕೆ ಸಂಸ್ಥೆಯ ಪರವಾಗಿ ಉಪಕುಲಪತಿಗಳಾದ ಎಸ್.ವಿ.ಸುರೇಶ್, ನಗರ ಯೋಜನಾ ತಜ್ಞ ಎಸ್.ವಿಶ್ವನಾಥ್ ಅವರಿಗೆ ಪ್ರದಾನ ಮಾಡಲಾಯಿತು.

ಜಿಕೆವಿಕೆ, ಎಂಜಿನೀಯರ್ ವಿಶ್ವನಾಥ್‌ಗೆ ಪ್ರಶಸ್ತಿ

ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ದೇಶದ ಪ್ರಮುಖ ಕೃಷಿ ಸಂಶೋಧನೆ ಹಾಗೂ ಶಿಕ್ಷಣ ಸಂಸ್ಥೆಯಾಗಿ, ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಹೊಂದಿರುವ ಎಂಜಿನೀಯರ್ ಎಸ್.ವಿಶ್ವನಾಥ್ ಅವರು ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಹುಲ್ ದ್ರಾವಿಡ್ ಅವರು ವಿದೇಶದಲ್ಲಿ ಇದ್ದ ಕಾರಣಕ್ಕೆ ಅವರು ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಜಿಕೆವಿಕೆ ಸಂಸ್ಥೆಯ ಪರವಾಗಿ ಉಪಕುಲಪತಿಗಳಾದ ಎಸ್.ವಿ.ಸುರೇಶ್ ಅವರು ಪಡೆದುಕೊಂಡರು.

ಸಿಎಂ ನೇತೃತ್ವದಲ್ಲಿ ದಾಖಲೆ ಅಭಿಯಾನ

ಶನಿವಾರ ಬೆಳಗ್ಗೆಯಿಂದಲೇ 50-60 ಸಾವಿರ ಸ್ವಯಂ ಸೇವಕರು ಉತ್ಸಾಹದಿಂದ ಕೆಂಪೇಗೌಡ ಬಡಾವಣೆ, ಏಏರಾಂ ಕಾಂಡಿ ಬಡಾವಣೆ ಸೇರಿದಂತೆ ಇತರೆಡೆ ಸುಮಾರು 15 ಲಕ್ಷ ಸಸಿಗಳನ್ನು ನೆಡುವ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡರು. ಕೇವಲ 12 ಗಂಟೆಗಳ ಅವಧಿಯಲ್ಲಿ ಇಷ್ಟೊಂದು ಸಸಿಗಳನ್ನು ನೆಟ್ಟು ದಾಖಲೆ ನಿರ್ಮಿಸಲಾಯಿತು. ದಶಪಥ ರಸ್ತೆ ಉದ್ಘಾಟನೆ ಬಳಿಕ ಸಿಎಂ ಡಿ.ಕೆ.ಶಿವಕುಮಾರ್ ಅವರು ಸ್ವತಃ ಸಲಿಕೆ ಹಿಡಿದು ಸ್ಥಳೀಯ ಸುಗಂಧ ಬಸವನ ಪಾದ ಗಿಡ ನೆಟ್ಟು ನೀರೆರೆದರು. ಉದ್ಘಾನ ನಗರ, ಏರ್ ಕಂಡೀಷನ್ ಸಿಟಿ ಎಂದು ಹೆಸರಾಗಿರುವ ಬೆಂಗಳೂರು ತನ್ನ ಉದ್ಯಾನಗಳಿಂದಲೇ ಹೆಸರಾಗಿದೆ. ಈ ಗರಿಮೆಯನ್ನು ಉಳಿಸುವ ಸಲುವಾಗಿ ಈ ಕಾರ್ಯಕ್ರಮವನ್ನು ಬಿಡಿಎ ವತಿಯಿಂದ ಆಯೋಜಿಸಲಾಗಿತ್ತು. ಮಿಯಾವಾಕಿ ಅರಣ್ಯ ಮಾದರಿಯಲ್ಲಿ ಸುಮಾರು 250 ಎಕರೆ ಪ್ರದೇಶದಲ್ಲಿ ಸ್ಥಳೀಯ ಜಾತಿಯ ವಿವಿಧ ಸಸಿಗಳನ್ನು ನೆಡಲಾಯಿತು.

Viswavani pg 03

28-06-2026 V-karantaka pg 08

ದ್ರಾವಿಡ್, ವಿಶ್ವನಾಥ್‌ಗೆ 'ಕೆಂಪೇಗೌಡ ಪ್ರಶಸ್ತಿ'

ಬೆಂಗಳೂರು: 'ಕೆಂಪೇಗೌಡ ಅಂತರ ರಾಷ್ಟ್ರೀಯ ಪ್ರಶಸ್ತಿ'ಯನ್ನು ಕ್ರಿಕೆಟಿಗ ರಾಹುಲ್ ದ್ರಾವಿಡ್ ಸೇರಿದಂತೆ ಮೂವರಿಗೆ ಪ್ರದಾನ ಮಾಡಲಾಯಿತು.

ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಚಲ್ಲಘಟ್ಟದಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ನೀಡಲಾಯಿತು.

ದೇಶದ ಪ್ರಮುಖ ಕೃಷಿ ಸಂಶೋಧನೆ ಹಾಗೂ ಶಿಕ್ಷಣ ಸಂಸ್ಥೆಯಾಗಿ, ಆಧುನಿಕ ಕೃಷಿ ಹಾಗೂ ನವೀನ ತಂತ್ರಜ್ಞಾನವನ್ನು ರೈತರಿಗೆ ಪರಿಚಯಿಸುವ ಮೂಲಕ ಹೆಸರು ಮಾಡಿರುವ ಜಿಕೆವಿಕೆ, ನಗರ ಯೋಜನಾ ತಜ್ಞರಾಗಿ ಪ್ರಸಿದ್ಧಿ ಪಡೆದಿರುವ ಎಂಜಿನಿಯರ್ ಎಸ್.ವಿಶ್ವನಾಥ್ ಅವರು ಹಾಗೂ ರಾಹುಲ್ ದ್ರಾವಿಡ್ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿತ್ತು. ಪ್ರಶಸ್ತಿಯು ₹ 5 ಲಕ್ಷ ನಗದು ಮತ್ತು ಸ್ಮರಣಿಕೆಯನ್ನು ಹೊಂದಿದೆ.

ರಾಹುಲ್ ದ್ರಾವಿಡ್ ಅವರು ವಿದೇಶದಲ್ಲಿ ಇದ್ದ ಕಾರಣಕ್ಕೆ ಅವರು ಪ್ರಶಸ್ತಿ ಸ್ವೀಕರಿಸಲು ಸಾಧ್ಯವಾಗಲಿಲ್ಲ. ಎಸ್. ವಿಶ್ವನಾಥ್, ಜಿಕೆವಿಕೆ ಸಂಸ್ಥೆಯ ಪರವಾಗಿ ಕುಲಪತಿ ಎಸ್.ವಿ.ಸುರೇಶ್, ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು.



ಕೆಂಪೇಗೌಡರ 517ನೇ ಜಯಂತಿಯಲ್ಲಿ ಬೆಂಗಳೂರು ಕೃಷಿ ವಿವಿ ಕುಲಪತಿ ಡಾ.ಎಸ್.ವಿ.ಸುರೇಶ್, ಜಲತಜ್ಞರಾದ ವಿಶ್ವನಾಥ್ ಅವರಿಗೆ ಸಿಎಂ ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಡಿಸಿಎಂ ಡಾ.ಜಿ. ಪರಮೇಶ್ವರ್, ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ಎಸ್.ಟಿ.ಸೋಮಶೇಖರ್ ಇತರರಿದ್ದರು.

28-06-2026 Udayavani pg 02

ವಿಜಯವಾಣಿ Bengaluru Edition Jun 28, 2026 Page No. 7



ನಗರ ಯೋಜನಾ ತಜ್ಞ ಎಸ್. ವಿಶ್ವನಾಥ್, ಜಿಕೆವಿಕೆ ಸಂಸ್ಥೆಯ ಪರವಾಗಿ ಉಪಕುಲಪತಿ ಎಸ್.ವಿ. ಸುರೇಶ್ ಅವರಿಗೆ ಕೆಂಪೇಗೌಡ ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಿಎಂ, ಡಿಸಿಎಂ, ವಿವಿಧ ಮಠಾಧೀಶರು ಇದ್ದರು.

ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ

ಈ ಹಿಂದಿನ ಸರ್ಕಾರ ಪೆರಿಫೆರಲ್ ರಿಂಗ್ ರಸ್ತೆ ಮಾಡಲು ತೀರ್ಮಾನಿಸಿತ್ತು. ಆದರೆ, ಕಾರ್ಯರೂಪಕ್ಕೆ ತಂದಿರಲಿಲ್ಲ. ನಾನು ಬೆಂಗಳೂರು ಜವಾಬ್ದಾರಿ ವಹಿಸಿಕೊಂಡ ಬಳಿಕ ಈ ಯೋಜನೆ ಜಾರಿಗೆ ಮುಂದಾದೆ ಎಂದು ಶಿವಕುಮಾರ್ ಹೇಳಿದರು. 123 ಕಿ.ಮೀ ಉದ್ದದ ಬೆಂಗಳೂರು ಬಿಜಿನೆಸ್ ಕಾರಿಡಾರ್ ರಸ್ತೆ (ಎಲೆಕ್ಟ್ರಾನಿಕ್ಸ್ ಸಿಟಿಯಿಂದ ಮೈಸೂರು ರಸ್ತೆ) ನಿರ್ಮಾಣ ಪ್ರಕ್ರಿಯೆ ಚಾಲನೆಯಲ್ಲಿದ್ದು, ಟೆಂಡರ್ ಕರೆಯಲಾಗಿದೆ. ಸದ್ಯದಲ್ಲೇ ಅಂತಿಮ ಅಧಿಸೂಚನೆ ಹೊರಡಿಸುತ್ತೇವೆ. ಜಮೀನು ಕಳೆದುಕೊಳ್ಳುವ ಮಾಲೀಕರಿಗೆ ಕೇ.35 ವಾಣಿಜ್ಯ, ಕೇ.40 ವಸತಿ ಪ್ರದೇಶ ಭೂಮಿ, ಟಿಡಿಆರ್ ನೀಡಲು ಸರ್ಕಾರ ಮುಂದಾಗಿದೆ. ಭೂ ಮಾಲೀಕರು ತಮಗೆ ಯಾವ ಆಯ್ಕೆ ಬೇಕೋ ಅದನ್ನು ತೆಗೆದುಕೊಳ್ಳಬಹುದು ಎಂದು ವಿವರಿಸಿದರು.

ಶಾಲಾಮಕ್ಕಳಿಗೆ ಗಿಡ ನೆಟ್ಟು ಬೆಳೆಸುವ ಸ್ಪರ್ಧೆ

ಹಸಿರು ಬೆಂಗಳೂರು ಕಟ್ಟಬೇಕು, ಕೆಂಪೇಗೌಡರ ದೂರದೃಷ್ಟಿ ಉಳಿಯಬೇಕು ಎಂದು ಬಿಡಿಎಯಿಂದ 15 ಲಕ್ಷ ಸಸಿ ನೆಡಲಾಗಿದೆ. ಬಾಲಗಂಗಾಧರ ಸ್ವಾಮೀಜಿ ಅವರು ಎಸ್ಸೆಂ ಕೃಷ್ಣ ಕಾಲದಲ್ಲಿ 5 ಕೋಟಿ ಸಸಿ ನೆಡಲು ಸಂಕಲ್ಪ ಮಾಡಿದ್ದನ್ನು ಮರೆಯಲು ಸಾಧ್ಯವಿಲ್ಲ. ಇದೇರೀತಿ ಬೆಂಗಳೂರಿನಲ್ಲಿ ಪ್ರತಿ ಶಾಲೆಗಳು ಒಂದೊಂದು ಪ್ರದೇಶದ ಉಸ್ತುವಾರಿ ವಹಿಸಿಕೊಂಡು ಅಲ್ಲಿ ಮಕ್ಕಳಿಂದ ಗಿಡ ನೆಡಿಸಿ ಬೆಳೆಸುವ ಕಾರ್ಯಕ್ರಮ ಮಾಡಬೇಕು. ಈ ವಿಜಾರದಲ್ಲಿ ಜಿಬಿಎಯಿಂದ ಸ್ಪರ್ಧೆ ಏರ್ಪಡಿಸಲಾಗುವುದು ಎಂದು ಸಿಎಂ ಮಾಹಿತಿ ನೀಡಿದರು.

ಎಸ್.ಎಂ.ಕೃಷ್ಣ ಗರಡಿಯಲ್ಲಿ ಬೆಳೆದಿರುವ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿಗೆ ಇನ್ನಷ್ಟು ಗರಿಮೆ ತರುವ ಕೆಲಸ ಮಾಡಲಿದ್ದಾರೆ ಎಂಬ ವಿಶ್ವಾಸ ಎಲ್ಲರಿಗೂ ಬಂದಿದೆ. ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಕೆಂಪೇಗೌಡರ ಜಯಂತಿ ಆಚರಣೆ ಘೋಷಿಸುವ ಮೂಲಕ ಅವರ ಆದರ್ಶವನ್ನು ನಾಡಿನೆಲ್ಲೆಡೆ ತಲುಪಿಸುವ ಕೆಲಸವಾಗುತ್ತಿದೆ. ಕೆಂಪೇಗೌಡರ ಹೆಸರಿನಲ್ಲಿ ಇನ್ನಷ್ಟು ಕೆಲಸವಾಗಬೇಕಿದ್ದು, ಈ ಬಗ್ಗೆ ಸಿಎಂಗೂ ಗೊತ್ತಿದೆ. ಅದನ್ನು ಸಾಕಾರಗೊಳಿಸುವಂತಾಗಲಿ.

| ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರು

ರೈತ ಸಂತೆ: ನೈಸರ್ಗಿಕ ಉತ್ಪನ್ನಗಳಿಗೆ ಬೇಡಿಕೆ

ಬೆಂಗಳೂರು: ಕೃಷಿ ವಿವಿ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ರೈತ ಸಂತೆಯಲ್ಲಿ ನೈಸರ್ಗಿಕ ಹಾಗೂ ಆರೋಗ್ಯಕರ ಆಹಾರ ಉತ್ಪನ್ನಗಳಿಗೆ ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ನೈಸರ್ಗಿಕ ಬೆಲ್ಲದಿಂದ ತಯಾರಿಸಿದ ತಾಜಾ ಗೋಧಿ ಪಾಯಸ, ಬಟರ್ ಫ್ರೂಟ್, ಮೇಘಾಲಯದ ಅರಿಶಿನ, ಕೃಷಿಕಾ ನ್ಯಾಚುರಲ್ಸ್ ಆರೋಗ್ಯ ಪಾನೀಯ ಹಾಗೂ ಹಸಿ ಅವರೆಕಾಳು ಸಿಪ್ಪೆ ತೆಗೆಯುವ ಯಂತ್ರ ಪ್ರಮುಖ ಆಕರ್ಷಣೆಗಳಾಗಿವೆ ಎಂದು ಕುಲಪತಿ ಡಾ.ಎಸ್.ವಿ.ಸುರೇಶ್ ತಿಳಿಸಿದರು. ವಿವಿಧ ರೈತರು ಬೆಳೆದ ತಾಜಾ ತರಕಾರಿ, ಸೊಪ್ಪು ಹಾಗೂ ಸಾವಯವ ಉತ್ಪನ್ನ ನೇರವಾಗಿ ಗ್ರಾಹಕರಿಗೆ ಲಭ್ಯವಾಗಿವೆ. ಸಿರಿಧಾನ್ಯ ಉತ್ಪನ್ನ, ಸಾವಯವ ಕೃಷಿ ಉತ್ಪನ್ನ, ಅಲಂಕಾರಿಕ ಸಸ್ಯ, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣ, ಜೇನು ಉತ್ಪನ್ನ ಸೇರಿ ಹಲವು ಮಳಿಗೆಗಳು ರೈತ ಸಂತೆಯಲ್ಲಿ ಇವೆ. ಆರೋ ಗ್ಯಕರ ಆಹಾರ, ನೈಸರ್ಗಿಕ ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವಲ್ಲಿ ರೈತ ಸಂತೆ ಯಶಸ್ವಿಯಾಗಿದೆ ಎಂದು ಹೇಳಿದರು.

28-06-2026 Viswavani pg 05

ರೈತ ಸಂತೆ: ಕೃಷಿ ವೈವಿಧ್ಯ ಅನಾವರಣ

ಗಾಂಧಿ ಕೃಷಿ ವಿಜ್ಞಾನ ಕೇಂದ್ರ: ಚಿಣ್ಣರ ಎತ್ತಿನ ಬಂಡಿ ಸವಾರಿ, ಖರೀದಿ ಜೋರು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಸಿ ಅವರೆಕಾಳು ಸಿಪ್ಪೆ ತೆಗೆವ ಯಂತ್ರ ಆಕರ್ಷಣೆ
- ಮೇಘಾಲಯ ಅರಿಶಿನದ ವಿಶಿಷ್ಟ ವಾಸನೆ
- 'ಗಿರ್' ಗಿಣ್ಣು ಗೋದಿ ಪಾಯಸದ ಸ್ವಾದ

ಬೆಂಗಳೂರು: ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಶನಿವಾರ ನಡೆದ 'ರೈತ ಸಂತೆ'ಗೆ ಜಮಾಯಿಸಿದ ಗ್ರಾಹಕರು ಸೊಪ್ಪು, ತರಕಾರಿ- ಹಣ್ಣುಗಳನ್ನು ಕೊಂಡರು. 'ಗಿರ್' ತಳಿಯ ಗಿಣ್ಣು ಗೋಧಿ ಪಾಯಸ ಸೇರಿದಂತೆ ವಿಶೇಷ ತಿನಿಸು ಸವಿದು, ವೈವಿಧ್ಯಮಯ ಕೃಷಿ ಲೋಕವನ್ನು ಕಣ್ತುಂಬಿಕೊಂಡರು. ಚಿಣ್ಣರು ಎತ್ತಿನ ಬಂಡಿ ಸವಾರಿ ಮಾಡಿದರು.

ಆರೋಗ್ಯಕರ ಆಹಾರ, ಪೌಷ್ಟಿಕಾಂಶದ ಮಾಹಿತಿ ಪಡೆದ ಗ್ರಾಹಕರು, ಅವಕಾಡೊ ಅರ್ಥಾತ್ ಬೆಣ್ಣೆಹಣ್ಣಿನ (ಬಟರ್‌ಫ್ರೂಟ್) ಮಹತ್ವವನ್ನು ಅರಿತರು. ನಾರಿನಾಂಶ, ಪೊಟ್ಯಾಷಿಯಂ, ವಿಟಮಿನ್-ಇ ಹಾಗೂ ಉತ್ಕರ್ಷಣ ನಿರೋಧಕ ಅಂಶಗಳ ಹಣ್ಣಿನ ಸಮೃದ್ಧತೆ ಹೃದಯದ ಆರೋಗ್ಯಕ್ಕೆ ಎಷ್ಟು ಅವಶ್ಯಕ ಎಂಬುದನ್ನು ಸಿಬ್ಬಂದಿ ವಿವರಿಸಿದರು.

ಹಸಿ ಅವರೆಕಾಳು ಸಿಪ್ಪೆ ತೆಗೆಯುವ ಯಂತ್ರ ಆಕರ್ಷಿಸಿದರೆ, 'ಗಿರಿರಾಜ' ತಳಿಯ ಕೋಳಿಗಳನ್ನು ಹೋಲುವ 'ಸ್ವರ್ಣಧಾರಾ' ತಳಿಗಮನ ಸೆಳೆಯಿತು.

ಮಲೆನಾಡಿನಲ್ಲಿ ಬೆಳೆಯುವ ಮೇಘಾಲಯ ಅರಿಶಿನದ ವಿಶಿಷ್ಟ ವಾಸನೆ-ಗಾಢ ಹಳದಿ ಬಣ್ಣಕ್ಕೆ ಮನಸೋತ ಗ್ರಾಹಕರು, ಸೇಬು, ಬೀಟ್‌ರೂಟ್ ಹಾಗೂ ಕ್ಯಾರೆಟ್‌ನಿಂದ ಮಾಡಿದ ಕೃಷಿಕ ನ್ಯಾಚುರಲ್ಸ್ ಪಾನೀಯದ ರುಚಿ ನೋಡಿದರು. ವೈವಿಧ್ಯದ ಬದನೆ, ಬೆಂಡೆ, ಸೌತೆ, ಹೀರೇ, ಸೋರೆ, ಹಾಗಲ, ದೊಡ್ಡ ಮೆಣಸು, ಹಸಿ ಮೆಣಸಿನಕಾಯಿಯನ್ನು ಖರೀದಿಸಿದರು.



ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಶನಿವಾರ ನಡೆದ 'ರೈತ ಸಂತೆ'ಯಲ್ಲಿ ಖರೀದಿ ನಡೆಸಿದ ನಾಗರಿಕರು

ಸಿರಿಧಾನ್ಯ ಉತ್ಪನ್ನಗಳು, ಸಾವಯವ ವಸ್ತುಗಳು, ಸುಗಂಧ ಮತ್ತು ಔಷಧೀಯ ಸಸ್ಯ, ಅಲಂಕಾರಿಕ ಗಿಡಗಳು, ಮೀನುಗಳು, ಗೊಬ್ಬರ, ಕರಕುಶಲ ವಸ್ತುಗಳು, ಅಡಿಕೆ- ರೇಷ್ಮೆ ಉತ್ಪನ್ನಗಳು, ಜೇನುತುಪ್ಪ ಕೊಂಡರು.

ಸಂತೆಗೆ ಕೃಷಿ ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎಸ್.ವಿ.ಸುರೇಶ ಚಾಲನೆ ನೀಡಿದರು. ವಿಸ್ತರಣಾ ನಿರ್ದೇಶಕ ವೈ.ಎನ್.ಶಿವಲಿಂಗಯ್ಯ, ಸಹಾಯಕ ನಿರ್ದೇಶಕ ಕೆ.ಪಿ.ರಫಪ್ರಸಾದ್ ಪಾಲ್ಗೊಂಡಿದ್ದರು.

28-06-2026 Prajayavani pg 3A

ಜುಲೈ 10ರಿಂದ 'ಸಸ್ಯ ಸಂತೆ'



ಬೆಂಗಳೂರು: ಇಲ್ಲಿನ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಜುಲೈ 10ರಿಂದ 12ರವರೆಗೆ 'ಸಸ್ಯ ಸಂತೆ' ನಡೆಯಲಿದ್ದು, ಮಾರಾಟದ ಜೊತೆಗೆ ಕೃಷಿ ಶಿಕ್ಷಣ ನೀಡಲಾಗುತ್ತಿದೆ. 'ಬೆಳೆ ಸಂಗ್ರಹಾಲಯ' ಗಮನ ಸೆಳೆಯಲಿದೆ.

ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯವು ಆಯೋಜಿರುವ

ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ದೇಸಿ ಜಾತಿಯ ಸಸಿ ನೆಡುವ ಕಾರ್ಯಕ್ರಮ

15 ಲಕ್ಷ ಸಸಿ ನೆಟ್ಟು ಜಿಬಿಎ ದಾಖಲೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ ಶನಿವಾರ ನಗರದ ವಿವಿಧೆಡೆ ಒಂದೇ ದಿನದಲ್ಲಿ ಸುಮಾರು 15 ಲಕ್ಷ ದೇಸಿ ಜಾತಿಯ ಸಸಿಗಳನ್ನು ನೆಡುವ ಮೂಲಕ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ಇತಿಹಾಸ ನಿರ್ಮಿಸಿದೆ. ಇದರೊಂದಿಗೆ ಭಾರತದ ಅತಿದೊಡ್ಡ ಹಸಿರು ಆವರಣ ಅಭಿಯಾನಗಳಲ್ಲಿ ಒಂದಾಗಿ ಕರ್ನಾಟಕದ ಸುಸ್ಥಿರ ಭವಿಷ್ಯದ ಬದ್ಧತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ ಮಹತ್ವದ ಹೆಜ್ಜೆಯಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಐದು ನಗರ ಪಾಲಿಕೆ, ವಿವಿಧ ಸರ್ಕಾರಿ ಇಲಾಖೆ ಹಾಗೂ ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಭಾಗಿತ್ವದಲ್ಲಿ ಬೆಂಗಳೂರು ನಗರ ಪುನರ್ಚೇತನ ಮಿಷನ್ 2026-30ರ ಅಂಗವಾಗಿ, ನಾಡಪ್ರಭು ಕೆಂಪೇಗೌಡರ ದಿನಾಚರಣೆಯ ಪ್ರಯುಕ್ತ 2026 ಶನಿವಾರ ನಗರದ ವಿವಿಧ ಭಾಗಗಳಲ್ಲಿ 15 ಲಕ್ಷ ಸ್ಥಳೀಯ ತಳಿ ಸಸಿಗಳನ್ನು ಸುಮಾರು 65 ಸಾವಿರಕ್ಕೂ ಹೆಚ್ಚಿನ ಮಂದಿ ನೆಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದಾರೆ.

ಈ ಕಾರ್ಯಕ್ರಮದ ಅಂಗವಾಗಿ ಬಿಡಿಎ ವತಿಯಿಂದ ಹಮ್ಮಿಕೊಳ್ಳಲಾದ ಕೆಂಪೇಗೌಡ ರನ್-2026 ಸಹ ಯಶಸ್ವಿಯಾಗಿ ನಡೆಯಿತು. 5 ಕಿ.ಮೀ. ಮತ್ತು 10 ಕಿ.ಮೀ. ಓಟಗಳಲ್ಲಿ ಸಾವಿರಾರು ಓಟಗಾರರು ಉತ್ಸಾಹದಿಂದ ಭಾಗವಹಿಸಿದರು. ಓಟವು ನಗರದ ಎಸ್.ಎಂ.ಕೃಷ್ಣ ರಸ್ತೆ, ಚಲ್ಲಘಟ್ಟ ಮೆಟ್ರೋ ನಿಲ್ದಾಣದಿಂದ ಆರಂಭಗೊಂಡು, ಅದೇ ಸ್ಥಳದಲ್ಲಿ ಸಮಾಪ್ತಿಗೊಂಡಿತು.

ಈ ಬೃಹತ್ ಸಸಿ ನೆಡುವ ಅಭಿಯಾನದಲ್ಲಿ ಸಾವಿರಾರು ನಾಗರಿಕರು, ವಿದ್ಯಾರ್ಥಿಗಳು, ಸರ್ಕಾರಿ ಅಧಿಕಾರಿಗಳು, ನಿವಾಸಿಗಳ ಕಲ್ಯಾಣ ಸಂಘಗಳು, ಸ್ವಯಂಸೇವಾ ಸಂಸ್ಥೆಗಳು, ಕಾರ್ಪೊರೇಟ್ ಸ್ವಯಂಸೇವಕರು ಹಾಗೂ ಪರಿಸರ ಸಂಘಟನೆಗಳು ಉತ್ಸಾಹದಿಂದ ಪಾಲ್ಗೊಂಡು ಹಸಿರು ಹಾಗೂ ಸುಸ್ಥಿರ ಬೆಂಗಳೂರಿನ ನಿರ್ಮಾಣಕ್ಕೆ ಕೈಜೋಡಿಸಿದರು. ಈ ಕಾರ್ಯಕ್ರಮವನ್ನು ಬೆಂಗಳೂರಿನ ನಾಡಪ್ರಭು ಕೆಂಪೇಗೌಡ ಬಡಾವಣೆ, ಬನಶಂಕರಿ 6ನೇ ಹಂತ, ಶಿವರಾಮ ಕಾರಂತ ಬಡಾವಣೆ, ಆಕ್ಸಿಜನ್ ಟ್ರೀ ಪಾರ್ಕ್‌ಗಳು, ಮಿಯಾವಾಕಿ ಅರಣ್ಯಗಳು ಸೇರಿದಂತೆ ಬಿಡಿಎ ಅಭಿವೃದ್ಧಿಪಡಿಸಿರುವ ವಿವಿಧ ಹಸಿರು ಪ್ರದೇಶಗಳಲ್ಲಿ ಕೈಗೊಳ್ಳಲಾಯಿತು. ಈ ಮಹತ್ವಾಕಾಂಕ್ಷಿ ಕಾರ್ಯಕ್ರಮವು ಬೆಂಗಳೂರಿನ ಹಸಿರು ಆವರಣವನ್ನು ಗಣನೀಯವಾಗಿ ವಿಸ್ತರಿಸುವುದು, ವಾಯು ಗುಣಮಟ್ಟವನ್ನು ಸುಧಾರಿಸುವುದು, ಜೀವ ವೈವಿಧ್ಯತೆಯನ್ನು ಸಂರಕ್ಷಿಸುವುದು, ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ತಗ್ಗಿಸುವುದು ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಸಾರ್ವಜನಿಕ ಪರಿಸರವನ್ನು ನಿರ್ಮಿಸುವ ಉದ್ದೇಶ ಹೊಂದಿದೆ.



ಮಾದರಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಗರಡಿಯಲ್ಲಿ ಬೆಳೆದಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಬೆಂಗಳೂರು ನಗರವನ್ನು ಅಭಿವೃದ್ಧಿಪಡಿಸಬೇಕು ಎಂಬ ಆಶಯದೊಂದಿಗೆ ನಾಡಪ್ರಭು ಕೆಂಪೇಗೌಡ ಮತ್ತು ಎಸ್.ಎಂ.ಕೃಷ್ಣ ಅವರು ಆದರ್ಶಗಳನ್ನು ಮೈಗೂಡಿಸಿಕೊಂಡು ರಾಜ್ಯದ ಹಿತ ಕಾಪಾಡುವ ಮೂಲಕ ಮಾದರಿ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಆಶಿಸಿದರು.

ಆರೋಗ್ಯಕರ ಪರಿಸರ ನಿರ್ಮಿಸಲು ದೃಢಸಂಕಲ್ಪ

15 ಲಕ್ಷ ವಿವಿಧ ಸಸಿಗಳನ್ನು ನಡುವ ಮೂಲಕ ಬೆಂಗಳೂರು ನಗರವನ್ನು ಗ್ರೀನ್ ಸಿಟಿಯಾಗಿ ಪರಿವರ್ತಿಸುವ ಮೂಲಕ ನಗರದ ಜನತೆಗೆ ಉತ್ತಮ ವಾತಾವರಣ ನಿರ್ಮಾಣ ಮಾಡುವ ಮೂಲಕ ಉತ್ತಮ ಆರೋಗ್ಯಕರ ಪರಿಸರ ನಿರ್ಮಿಸಲು ನಾವೆಲ್ಲರೂ ದೃಢಸಂಕಲ್ಪ ಮಾಡಬೇಕಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಈ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಇವತ್ತು 15 ಲಕ್ಷ ದೇಸಿ ಸಸಿಗಳ ನೆಡುವ ಕಾರ್ಯಕ್ರಮವು ಕರ್ನಾಟಕದ ಸುಸ್ಥಿರ ಅಭಿವೃದ್ಧಿಯ ಪಯಣದಲ್ಲಿ ಐತಿಹಾಸಿಕ ಮೈಲಿಗಲ್ಲಾಗಿದೆ. ಬೆಂಗಳೂರು ಬೆಳೆಯುತ್ತಿರುವಂತೆ ಅದರ ಹಸಿರು ಆವರಣವನ್ನು ಸಂರಕ್ಷಿಸುವುದು ಮತ್ತು ವಿಸ್ತರಿಸುವುದು ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ನಗರಾಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ನಡುವೆ ಸಮತೋಲನ ಸಾಧಿಸುವ ಸರ್ಕಾರದ ಬದ್ಧತೆಯನ್ನು ಈ ಕಾರ್ಯಕ್ರಮ ಪ್ರತಿಬಿಂಬಿಸುತ್ತದೆ. ಇಂದು ನೆಡಲಾದ ಪ್ರತಿಯೊಂದು ಸಸಿಯೂ ಶುದ್ಧ ಗಾಳಿ, ಉತ್ತಮ ಪರಿಸರ ಸಮತೋಲನ ಹಾಗೂ ಮುಂದಿನ ಪೀಳಿಗೆಗೆ ಆರೋಗ್ಯಕರ ಭವಿಷ್ಯಕ್ಕಾಗಿ ಮಾಡಿದ ಅಮೂಲ್ಯ ಹೂಡಿಕೆಯಾಗಿದೆ ಎಂದು ಹೇಳಿದರು.

28-06-2026
Hosadiganta Pg 03

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ವಿಜ್ಞಾನಿಗಳಿಂದ ಆವಿಷ್ಕಾರ

ಬರ ಸಹಿಷ್ಣು 'ಎಂಎಲ್-322 ರಾಗಿ ತಳಿ' ಅಭಿವೃದ್ಧಿ

• ಮೋಹನ್ ಕುಮಾರ ಸಿ.

ಬೆಂಗಳೂರು: ಮಳೆ ಅಭಾವದಲ್ಲೂ 110 ದಿನಗಳಷ್ಟು ಕಡಿಮೆ ಅವಧಿಯಲ್ಲಿ ಅಧಿಕ ಇಳುವರಿ ನೀಡುವ ಬರ ಸಹಿಷ್ಣು ರಾಗಿ ತಳಿ 'ಎಂಎಲ್- 322' ಅನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಅಭಿವೃದ್ಧಿ ಪಡಿಸಿದ್ದು, ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

'ಮುಂಗಾರು ಈ ಬಾರಿ ತಡವಾಗಿದ್ದು, ಶೇ 30ರಷ್ಟು ಮಳೆ ಕಡಿಮೆಯಾಗುವ ಸಂಭವ ಇದೆ. ಕಳೆದ ಹಲವು ವರ್ಷಗಳ ಸಂಶೋಧನೆಯಿಂದ ಅಭಿವೃದ್ಧಿಪಡಿಸಿರುವ ಈ ಸುಧಾರಿತ ತಳಿಯು ರೈತರಿಗೆ ಚೇತರಿಕೆ ನೀಡಲಿದೆ' ಎನ್ನುತ್ತಾರೆ ಇಲ್ಲಿನ ಕೃಷಿ ವಿಜ್ಞಾನಿಗಳು.

ರಾಗಿ ಬೆಳೆಯುವ ಜಿಲ್ಲೆಗಳಾದ ತುಮಕೂರು, ಮಂಡ್ಯ, ಹಾಸನ, ಮೈಸೂರು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ಚಿಕ್ಕಬಳ್ಳಾಪುರ, ಕೋಲಾರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಶಿವಮೊಗ್ಗದ ಮಳೆಯಾಶ್ರಿತ ಬಯಲುಸೀಮೆ ರೈತರಿಗೆ ಹೊಸ ತಳಿಯು ನೆರವಾಗಲಿದೆ.

ಮೂರೂವರೆ ತಿಂಗಳಲ್ಲಿ ಕಟಾವು: 'ಮಧ್ಯಮಾವಧಿಯ ತಳಿಯಾಗಿದ್ದು, ಆಗಸ್ಟ್- ಸೆಪ್ಟೆಂಬರ್‌ನಲ್ಲಿ ಬಿತ್ತನೆ ಮಾಡಿದರೆ 105 ರಿಂದ 110 ದಿನಗಳಲ್ಲಿ ಕಟಾವಿಗೆ ಬರಲಿದೆ. ಬೇರೆ ತಳಿಗಳಿಗೆ 120ಕ್ಕೂ ಹೆಚ್ಚು ದಿನಗಳು ಬೇಕು. ಮಳೆಯಾಶ್ರಿತ ಖುಷ್ಕಿ ಭೂಮಿಯಲ್ಲಿ ಎಕರೆಗೆ 14 ರಿಂದ 16 ಕ್ವಿಂಟಲ್ ಧಾನ್ಯ ಹಾಗೂ 4.5 ಟನ್ ಮೇವು ಸಿಗುತ್ತದೆ' ಎಂದು ತಳಿ ಅಭಿವೃದ್ಧಿಪಡಿಸಿರುವ ವಿಜ್ಞಾನಿ ಮೋಹನ್ ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

ನೀರಾವರಿ ಪ್ರದೇಶದಲ್ಲಿ ಇದೇ ತಳಿಯಿಂದ 18ರಿಂದ 20 ಕ್ವಿಂಟಲ್ ಧಾನ್ಯ ಹಾಗೂ 5.2 ಟನ್ ಮೇವು ಇಳುವರಿ ಪಡೆಯಬಹುದು. ಹುಲ್ಲಿನ ಕಾಂಡವು ಗಟ್ಟಿಯಾಗಿದ್ದು, ಕಟಾವಿಗೂ ಮೊದಲು ತೀವ್ರ ಗಾಳಿಗೆ ನೆಲಕಚ್ಚದು. ಕುತ್ತಿಗೆ ಬೆಂಕಿ, ತೆನೆ ಬೆಂಕಿ, ಇಳುಕು ರೋಗ ನಿರೋಧಕ ಶಕ್ತಿ ಹೊಂದಿರುವ ತಳಿಯು ದೀರ್ಘ ಒಣ ಹವೆ ಮತ್ತು ತೇವಾಂಶ ಕೊರತೆಯನ್ನು ಸಹಿಸುತ್ತದೆ. ಕೀಟನಾಶಕ, ಶಿಲೀಂಧ್ರ ನಾಶಕಗಳ ಬಳಕೆ ಅಗತ್ಯವಿಲ್ಲ.

ರಾಗಿ ಗಿಡದ ಬುಡದಲ್ಲಿ ಹೆಚ್ಚಿನ ತೆಂಡೆಗಳು ಒಡೆಯುವುದರಿಂದ ತೆನೆಗಳ ಸಂಖ್ಯೆಯೂ ಹೆಚ್ಚಲಿದೆ. ಧಾನ್ಯದ ಹೊಟ್ಟು ಗಟ್ಟಿಯಾಗಿದ್ದು, ಒಕ್ಕಣೆ ಮಾಡುವಾಗ ದೂಳಿನ ಪ್ರಮಾಣವೂ ಕಡಿಮೆ.

ಮುಖ್ಯಾಂಶಗಳು

- ಮೂರೂವರೆ 30ಗಳಲ್ಲಿ ಫಸಲು
- ಎಕರೆಗೆ 14-16 ಕ್ವಿಂಟಲ್ ಇಳುವರಿ
- 'ಬೆಂಕಿ ರೋಗ' ನಿರೋಧಕ ಶಕ್ತಿ

> ಬದಲಾಗುತ್ತಿರುವ ಹವಾಮಾನ ಸವಾಲುಗಳಿಗೆ ವಿಶ್ವವಿದ್ಯಾಲಯವು ಅಭಿವೃದ್ಧಿ ಪಡಿಸಿರುವ 'ಎಂಎಲ್- 322' ರಾಗಿ ತಳಿಯು ರಾಜ್ಯದ ಬಯಲುಸೀಮೆಯ ರೈತರಿಗೆ ವರದಾನವಾಗಲಿದೆ
> **ಪ್ರೊ.ಎಸ್.ವಿ.ಸುರೇಶ,** ಕುಲಪತಿ

'ಆನ್‌ಲೈನ್‌ನಲ್ಲಿ ಖರೀದಿಗೆ ಅವಕಾಶ'



ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ಬೆಳೆದಿರುವ 'ಎಂಎಲ್ 322' ರಾಗಿ

'950 ಕ್ವಿಂಟಲ್‌ನಷ್ಟು ಎಂಎಲ್-322 ಬಿತ್ತನೆ ಬೀಜದ ದಾಸ್ತಾನು ಸಿದ್ಧಗೊಂಡಿದೆ. ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ) ಮಾರಾಟ ಮಳಿಗೆ ಇಲ್ಲವೇ www.uasgkvkseeds.org ವೆಬ್‌ಸೈಟ್‌ನಲ್ಲಿ ಖರೀದಿಸುವ ವ್ಯವಸ್ಥೆ ಮಾಡಲಾಗಿದೆ. ಮಧ್ಯವರ್ತಿಗಳ ಹಾವಳಿ ಇಲ್ಲ. ನೇರವಾಗಿ ದೂರವಾಣಿ ಸಂಖ್ಯೆ 080-23620494ಕ್ಕೆ ಕರೆ ಮಾಡಬಹುದು' ಎನ್ನುತ್ತಾರೆ ವಿಶ್ವವಿದ್ಯಾಲಯದ ಬೀಜ ವಿಭಾಗದ ವಿಶೇಷ ಅಧಿಕಾರಿ ಕೆ.ವಿಶ್ವನಾಥ್.

Prajavani Pg 03

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ

Jun 29, 2026 Page No. 11
Powered by: erelego.com

ಕೃಷಿ ಪರಿಕರ ದುಬಾರಿ ಅನ್ನದಾತ ಕಂಗಾಲು



ಶಿಕಾರಿಪುರ ತಾಲೂಕು ಶೀರಿಹಳ್ಳಿ ತಾಂಡಾದಲ್ಲಿ ಬಿತ್ತನೆಗೆ ಟ್ರ್ಯಾಕ್ಟರ್ ಮೂಲಕ ಜಮೀನು ಉಳುಮೆ ಮಾಡಿದ ರೈತರು.

■ ನವೀನ್ ಬಿಲ್ಲಾಣಿ ಶಿವಮೊಗ್ಗ

ಮುಂಗಾರು ಮಳೆ ಕೊರತೆ ಅನ್ನದಾತರ ನಿದ್ದೆಗೆಡಿಸಿರುವ ನಡುವೆ, ಕೃಷಿ ಯಂತ್ರೋಪಕರಣ, ಬಿತ್ತನೆ ಬೀಜ, ರಸಗೊಬ್ಬರ, ಕೀಟನಾಶಕಗಳ ದರ ಸದ್ದಿಲ್ಲದೆ ಏರಿಕೆ ಆಗಿರುವುದು ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

- ಯಂತ್ರೋಪಕರಣ ಬಾಡಿಗೆ ಹೆಚ್ಚಳ
- ರಸಗೊಬ್ಬರ, ಕೀಟನಾಶಕಗಳೂ ತುಟ್ಟಿ

ಮುಂಗಾರುಪೂರ್ವ ಹಾಗೂ ಮುಂಗಾರು ಆರಂಭದ ಕೆಲ ದಿನಗಳಲ್ಲಿ ಸುರಿದ ಅಲ್ಪ ಸ್ವಲ್ಪ ಮಳೆಯಿಂದ ಭೂಮಿ ಹದಗೊಳಿಸಲು ಮುಂದಾಗಿರುವ ರೈತರಿಗೆ ಕೃಷಿ ಯಂತ್ರೋಪಕರಣಗಳ ಬಾಡಿಗೆ ದರ ಪೆಟ್ಟು ನೀಡಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಯಂತ್ರೋಪಕರಣಗಳ ಬಾಡಿಗೆ ದರ ಗಂಟೆಗೆ ಕನಿಷ್ಠ 100ರಿಂದ 200 ರೂ.ವರೆಗೆ ಏರಿಕೆಯಾಗಿದೆ. ಕಲ್ಟಿವೇಟರ್ ನೇರಿ ಟ್ರ್ಯಾಕ್ಟರ್‌ನ ಬಾಡಿಗೆ ದರ ಗಂಟೆಗೆ 900 ರೂ. ಇದ್ದಿದ್ದು, ಸಾವಿರ ರೂ., ರೋಟಾವೇಟರ್ 1,000 ರೂ. ಇದ್ದದ್ದು 1,100 ರೂ. ಗಡಿ ದಾಟಿದೆ. ತೋಟದಲ್ಲಿ ಬಸಿಗಾಲುವೆ (ಟ್ರಂಚ್) ತೆಗೆಯಲು 1,200 ರೂ.ರಿಂದ 1,400 ರೂ.ಗೆ ಏರಿಕೆಯಾಗಿದೆ. ಹಿಟಾಚಿ, ಜೆಸಿಬಿಗಳ ದರ ಹೆಚ್ಚಳ ರೈತರನ್ನು ಚಿಂತೆಗೆ ದೂಡಿದೆ.

ಯುದ್ಧದ ಎಫೆಕ್ಟ್: ಕೊಲ್ಲಿ ರಾಷ್ಟ್ರಗಳಲ್ಲಿ ಯುದ್ಧದ ಪರಿಣಾಮ ಪೆಟ್ರೋಲ್, ಡೀಸೆಲ್ ನೇರಿ ಕೃಷಿ ಚಟುವಟಿಕೆಗೆ ಅಗತ್ಯವಾಗಿರುವ ಉತ್ಪನ್ನಗಳ ಕಚ್ಚಾ ವಸ್ತುಗಳ ದರ ದುಪ್ಪಟ್ಟಾಗಿದೆ. ಇದನ್ನೇ ನೆಪ ಮಾಡಿಕೊಂಡು ಜೆಸಿಬಿ, ಟ್ರ್ಯಾಕ್ಟರ್ ಬಾಡಿಗೆ ದರವೂ ಗಣನೀಯವಾಗಿ ಏರಿಕೆಯಾಗಿದೆ.

ಬಿತ್ತನೆ ಬೀಜ, ರಸಗೊಬ್ಬರ ದುಬಾರಿ

ಮೆಕ್ಕೆಜೋಳದ ನಾಲ್ಕು ಕೆಜಿ ಬ್ಯಾಗ್ ಅನ್ನು 1,800ರಿಂದ 1,900 ರೂ.ಗೆ ಮಾರಾಟ ಮಾಡಲಾಗುತ್ತಿದೆ. ರೈತ ಸಂಪರ್ಕ ಕೇಂದ್ರಗಳ ಮೂಲಕ ಖರೀದಿಗೆ ಅವಕಾಶವಿದ್ದರೂ ಕೆಲ ರೈತರು ವ್ಯಾಪಾರಿಗಳ ಬಳಿ ಸಾಲಕ್ಕೆ ಬಿತ್ತನೆ ಬೀಜಗಳನ್ನು ತರಿಸಿಕೊಳ್ಳುತ್ತಿದ್ದಾರೆ. ಪರಿಣಾಮ ಕಳೆದ ವರ್ಷ ನಾಲ್ಕು ಕೆಜಿ ಬ್ಯಾಗ್‌ಗೆ 1,200ರಿಂದ 1,250 ರೂ. ಇದ್ದ ದರ ಇಂದು ಪ್ರತಿ ಬ್ಯಾಗ್‌ಗೆ 500ರಿಂದ 600 ರೂ.ವರೆಗೂ ಹೆಚ್ಚಳವಾಗಿದೆ ಎನ್ನುತ್ತಾರೆ ರೈತರು. ಇನ್ನು ಮುಂಗಾರಿನ ಕೃಷಿಗೆ ಅಗತ್ಯವಾದಷ್ಟು ರಸಗೊಬ್ಬರ ದಾಸ್ತಾನಿದ್ದರೂ ದರ ಏರಿಕೆಯಾಗಿದೆ. 16-20 ರಸಗೊಬ್ಬರ 50 ಕೆಜಿ ಬ್ಯಾಗ್‌ಗೆ 1650ರಿಂದ 2180 ರೂ.ಗೆ ಏರಿದೆ. 20-10 ರಸಗೊಬ್ಬರ 1600ರಿಂದ 1,850 ರೂ., 10-26 ರಸಗೊಬ್ಬರ 1800ರಿಂದ 2,200 ರೂ., ಸುಫಲಾ ಗೊಬ್ಬರ 1600ರಿಂದ 2000 ರೂ.ವರೆಗೂ ಮಾರಾಟವಾಗುತ್ತಿದೆ.

> ರೈತರು ಕೃಷಿ ಚಟುವಟಿಕೆಗಳನ್ನು ನಡೆಸುವುದೇ ಕಷ್ಟಕರವಾಗಿದೆ. ಯಂತ್ರೋಪಕರಣಗಳ ಬಾಡಿಗೆ, ಬಿತ್ತನೆ ಬೀಜ, ರಸಗೊಬ್ಬರಗಳ ದರವೂ ಕಳೆದ ವರ್ಷಕ್ಕಿಂತ ಹೆಚ್ಚಾಗಿದೆ. ಬೆಳೆಗಳಿಗೆ ಮಾತ್ರ ವೈಜ್ಞಾನಿಕ ಬೆಲೆ ಸಿಗುತ್ತಿಲ್ಲ. ಒಂದೆಡೆ ಮಳೆ ಕೊರತೆ, ಮತ್ತೊಂದೆಡೆ ಕೃಷಿ ಯಂತ್ರೋಪಕರಣ ಬಾಡಿಗೆ ಹೆಚ್ಚಳ ರೈತರಿಗೆ ನುಂಗಲಾರದ ತುತ್ತಾಗಿದೆ.
> | ನಿರೀಶ್ ಕೆಪಿಕ

Agri Clippings Pg. 2

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ
vittasuggi@gmail.com
ವಿತ್ತವಾಣಿ
ಮನೆ ಮನೆಯ ಮನಿಮಾತು
ನಂ. 1 ಕನ್ನಡ ದಿನಪತ್ರಿಕೆ ವಿಜಯವಾಣಿ
VIJAYAVANI » BENGALURU
ಸೋಮವಾರ 29 ಜೂನ್ 2026 29 JUNE 2026
5A



ವಿರೂಪಾಕ್ಷಯ್ಯ ಗುದ್ನಯ್ಯನವರಮಠ ಹುಬ್ಬಳ್ಳಿ

ರೈತರು ಕೃಷಿಯೊಂದಿಗೆ ಕುರಿ, ಕೋಳಿ ಸಾಕಾಣಿಕೆ, ಹೈನುಗಾರಿಕೆಯಂಥ ಉಪಕಸುಬುಗಳ ಮೂಲಕ ಯಶಸ್ಸು ಗಳಿಸುತ್ತಿದ್ದು, ಆಂತಹವರಲ್ಲಿ ಧಾರವಾಡ ಜಿಲ್ಲೆ ನವಲಗುಂದ ತಾಲೂಕಿನ ಮೊರಬ ಗ್ರಾಮದ ರೈತ ಮಂಜುನಾಥ ಈಶ್ವರಪ್ಪ ಕಾಲವಾಡ ಕೂಡ ಒಬ್ಬರು. ಇವರು ಕುರಿ ಸಾಕಾಣಿಕೆಯಿಂದ 2025-26ನೇ ಸಾಲಿನಲ್ಲಿ ಬರೋಬ್ಬರಿ 50 ಲಕ್ಷ ರೂ. ಆದಾಯ ಗಳಿಸಿ ಬೀಗಿದ್ದಾರೆ. ಪಿಯುಸಿ ಓದಿರುವ ಮಂಜುನಾಥ ಕಾಲವಾಡ 2019-20ರಲ್ಲಿ 10 ಕುರಿ ಮರಿಗಳಿಂದಿಗೆ ಕುರಿ ಸಾಕಾಣಿಕೆ ಆರಂಭಿಸಿದ್ದು, ಸದ್ಯ ಇವರ ಬಳಿ 550 ಕುರಿಗಳಿವೆ. ಒಂದು ಕುರಿ 6 ತಿಂಗಳಿಗೆ ಒಂದರಂತೆ ವರ್ಷಕ್ಕೆ 2 ಬಾರಿ ಮರಿ ಹಾಕುತ್ತದೆ. ಒಂದು ಕುರಿ ಐದಾರು ವರ್ಷ ಮರಿ ಹಾಕಿದ ಬಳಿಕ ಅವುಗಳನ್ನೂ ಮಾರಾಟ ಮಾಡಲಾಗುತ್ತದೆ. ಹೀಗೆ ಪ್ರತಿ ತಿಂಗಳು 45 ರಿಂದ 55 ಕುರಿಗಳನ್ನು ಒಂದಕ್ಕೆ 8 ರಿಂದ 9 ಸಾವಿರ ರೂ.ವರೆಗೆ ಮಾರಾಟ ಮಾಡುತ್ತಿದ್ದಾರೆ.

- ಮಂಡ್ಯ, ಮೈಸೂರು ಭಾಗದಿಂದ ಹೆಚ್ಚು ಬೇಡಿಕೆ
- ಕುರಿ ಹಿಕ್ಕಿ ಗೊಬ್ಬರದಿಂದ ಪ್ರತಿ ತಿಂಗಳು ಲಕ್ಷ ರೂ. ಲಾಭ

5 ತಿಂಗಳು ಮುಂಚಿತ ಬುಕಿಂಗ್: ಸ್ಥಳೀಯರು ಸೇರಿ ಮೈಸೂರು, ಮಂಡ್ಯ, ಹಾಸನ, ತುಮಕೂರು ಜಿಲ್ಲೆಗಳ ವ್ಯಾಪಾರಸ್ಥರು, ಗ್ರಾಹಕರು 5 ತಿಂಗಳು ಮುಂಚಿತವಾಗಿ ಕುರಿಗಳ ಖರೀದಿಗೆ ಬುಕಿಂಗ್ ಮಾಡಿದ್ದಾರೆ. ಪ್ರತಿ ತಿಂಗಳು 10ರಿಂದ 10ನೇ ತಾರೀಖಿನವರೆಗೆ ಕುರಿಗಳನ್ನು ಮಾರಾಟ ಮಾಡಲಾಗುತ್ತಿದೆ.

1.30 ಕೋ.ರೂ. ಯೋಜನೆ: ಹೈಟೆಕ್ ಶೆಡ್, ಕಾರ್ಮಿಕರ ಕೊಠಡಿ, ಮೇವು ಸಂಗ್ರಹಕ್ಕೆ ಪ್ರತ್ಯೇಕ ವ್ಯವಸ್ಥೆ ಮತ್ತು ಕುರಿಗಳ ಖರೀದಿ ಸೇರಿ ಒಟ್ಟು 1.30 ಕೋಟಿ ರೂ. ಮೊತ್ತದ ಯೋಜನೆ ರೂಪಿಸಲಾಗಿತ್ತು. ಆ ಪೈಕಿ 2023ರಲ್ಲಿ ನಬಾರ್ಡ್‌ನಿಂದ 92 ಲಕ್ಷ ರೂ. ಸಾಲ ಸೌಲಭ್ಯ ಪಡೆದರು. ಇದರಲ್ಲಿ ನಬಾರ್ಡ್ 41 ಲಕ್ಷ ರೂ ಸಹಾಯಧನ ನೀಡಿದ್ದು, ಇನ್ನುಳಿದ 51 ಲಕ್ಷ ರೂ. ಸಾಲದ ಹಣವನ್ನು ಪ್ರತಿ ತಿಂಗಳು ಕಂತಿನ ಮೂಲಕ ಪಾವತಿಸುತ್ತಿದ್ದಾರೆ.

80 ಲಕ್ಷ ರೂ. ಪಾವತಿಸಿ ಕುರಿ ಖರೀದಿ: 2023ರಲ್ಲಿ 80 ಲಕ್ಷ ರೂ. ಪಾವತಿಸಿ, ಅಮೀನಗಡ, ಕುಂಕುಮಪಾಳ್ಯ ಮತ್ತು ಬಾಗಲಕೋಟೆ ಜಿಲ್ಲೆಯ ಕೆರೂರಿನಿಂದ 500 ಕುರಿ ಮರಿಗಳನ್ನು ಒಂದಕ್ಕೆ 12ರಿಂದ 13 ಸಾವಿರ ರೂ. ನೀಡಿ ಖರೀದಿ ಮಾಡಿದ್ದೆ ಎನ್ನುತ್ತಾರೆ ಮಂಜುನಾಥ.



ಧಾರವಾಡ ಕೃಷಿ ವಿವಿ ಆವಿಷ್ಕಾರ ಸಾಧಕ ರೈತ ಪ್ರಶಸ್ತಿ ನೀಡಿ ಗೌರವಿಸಿರುವುದು.

ಆವಿಷ್ಕಾರ ರೈತ ಪ್ರಶಸ್ತಿ

ಕೃಷಿ ಇಲಾಖೆ 2025ರಲ್ಲಿ ಮಂಜುನಾಥ ಅವರಿಗೆ ಶ್ರೇಷ್ಠ ಕೃಷಿಕ ಪ್ರಶಸ್ತಿ ಮತ್ತು 25 ಸಾವಿರ ರೂ. ನಗದು ಬಹುಮಾನ ನೀಡಿದೆ. 2026ರಲ್ಲಿ ಧಾರವಾಡ ಕೃಷಿ ವಿವಿ ಆವಿಷ್ಕಾರ ಸಾಧಕ ರೈತ ಪ್ರಶಸ್ತಿ ನೀಡಿ ಗೌರವಿಸಿದೆ.



ಕುರಿ ಸಾಕಣೆ ಕೈತುಂಬಾ ಕಾಸು

ಪ್ರತಿ ತಿಂಗಳು 55 ಮರಿ ಮಾರಾಟ ವರ್ಷಕ್ಕೆ 50 ಲಕ್ಷ ರೂ. ಆದಾಯ

50 ಲಕ್ಷ ರೂ. ಆದಾಯ

ಕುರಿ, ಗೊಬ್ಬರ, ಜವಾರಿ ಕೋಳಿ ಮೊಟ್ಟೆ ಮಾರಾಟದಿಂದ 2024ರ ಏ.1ರಿಂದ 2025ರ ಮಾ. 31ರವರೆಗೆ 12 ಲಕ್ಷ ರೂ., 2025ರಲ್ಲಿ 32 ಲಕ್ಷ ರೂ., 2026ರ ಆರ್ಥಿಕ ವರ್ಷದಲ್ಲಿ ಮಾ.31ರವರೆಗೆ ಎಲ್ಲ ಖರ್ಚು ಕಳೆದು 50 ಲಕ್ಷ ರೂ., ಆದಾಯ ಗಳಿಸಿದ್ದಾರೆ ರೈತ ಮಂಜುನಾಥ.

ಕುರಿ ಗೊಬ್ಬರದಿಂದಲೂ ಹಣ

ಪ್ರತಿ ತಿಂಗಳು ಕುರಿ ಹಿಕ್ಕೆ ಮಾರಾಟದಿಂದಲೇ ಲಕ್ಷ ರೂ. ಆದಾಯ ಬರುತ್ತಿದೆ. 20 ಟ್ರ್ಯಾಕ್ಟರ್ ಗೊಬ್ಬರ ಮಾರಾಟ ಮಾಡುತ್ತಾರೆ. 1 ಟ್ರ್ಯಾಕ್ಟರ್‌ಗೆ 5 ಸಾವಿರ ರೂ. ದರ ಇದೆ. ತಿರಸಿ, ಸಿದ್ದಾಪುರ, ಸಾಗರ ಭಾಗದ ಅಡಕೆ, ತೆಂಗು ಬೆಳೆಗಾರರು ಬಂದು ಗೊಬ್ಬರ ಕೊಂಡೊಯ್ಯುತ್ತಾರೆ.

ದೇಸಿ ಹಸು, ಕೋಳಿ ಸಾಕಣೆ

ಎರಡು ಜವಾರಿ ಕೋಳಿಗಳನ್ನು ಸಾಕಿದ್ದು, ಪ್ರತಿದಿನ 200ರಿಂದ 25 ಮೊಟ್ಟೆ ಸಿಗುತ್ತವೆ. ಒಂದಕ್ಕೆ 20 ರೂ. ನಂತೆ ಮಾರಾಟ ಮಾಡಲಾಗುತ್ತಿದೆ. ದೇಸಿ ಹಸು ತಳಿ ಸಂರಕ್ಷಣೆ ಉದ್ದೇಶದಿಂದ 5 ಜವಾರಿ ಆಕಳು ಸಾಕಾಣಿಕೆ ಮಾಡಲಾಗಿದೆ. ಇವುಗಳ ಸಗಣಿಯಿಂದ ಜೀವಾಮೃತ ತಯಾರಿಸಿ ಹೊಲಗಳಿಗೆ ಹಾಕಲಾಗುತ್ತಿದೆ.



ಯುವ ಜನರು ಓದು ಮುಗಿದ ಬಳಿಕ ಖಾಸಗಿ ಅಥವಾ ಸರ್ಕಾರಿ ನೌಕರಿ ಸಿಗಲಿ ಎಂದು ಕಾಯುವ ಬದಲು ಕೃಷಿ ಜತೆಗೆ ಉಪಕಸುಬುಗಳಾದ ಜೇನು ಸಾಕಾಣಿಕೆ, ಕುರಿ, ಕೋಳಿ, ಮೀನು ಸಾಕಣಿ, ಹೈನುಗಾರಿಕೆ ಮಾಡಬೇಕು. ಇದರಿಂದ ಆರ್ಥಿಕವಾಗಿ ಸದೃಢರಾಗಬಹುದು.

ಮಂಜುನಾಥ ಕಾಲವಾಡ
ಕುರಿ ಸಾಕಾಣಿಕೆ ಮಾಡಿದ ರೈತ, ಮೊರಬ



ಮೊರಬ ಗ್ರಾಮದ ಯುವ ರೈತ ಮಂಜುನಾಥ ಕಾಲವಾಡ ಅವರಿಗೆ ಕುರಿ ಸಾಕಾಣಿಕೆಗೆ ನಬಾರ್ಡ್‌ನಿಂದ ಸಾಲ ಸೌಲಭ್ಯ ನೀಡಲಾಗಿದೆ. ಯುವಕರು ಕ್ರಮವಹಿಸಿದ್ದಲ್ಲಿ ಯಶಸ್ಸು ಗಳಿಸುವುದು ಸಾಧ್ಯ ಎಂಬುದಕ್ಕೆ ಮಂಜುನಾಥ ಕಾಲವಾಡ ಸಾಕ್ಷಿ. ಸಾಲ ಸೌಲಭ್ಯ ಸದ್ಬಳಕೆ ಮಾಡಿಕೊಂಡು ಮಾದರಿ ರೈತರಾಗಿದ್ದಾರೆ.

ಮಯೂರ ಕಾಂಬಳೆ
ಉಪ ಮಹಾಪ್ರಬಂಧಕ ನಬಾರ್ಡ್ ಧಾರವಾಡ



ಜಗತ್ತಿನಲ್ಲಿ ಕೃಷಿಗೆ ಯೋಗ್ಯ ಭೂಮಿ ಹೆಚ್ಚಿನ ಪ್ರಮಾಣದಲ್ಲಿ ಲಭ್ಯ ಇರುವುದು ಭಾರತದಲ್ಲಿ. ಇದು ನಿಸರ್ಗ ಮತ್ತು ದೇವರ ಕೊಡುಗೆ. ದೇಶದ ಯುವಕರು ಆಸಕ್ತಿಯಿಂದ ಕೃಷಿ ಮಾಡಿದರೆ ಯಶಸ್ಸು ಖಂಡಿತ ಸಿಗುತ್ತದೆ. ಜತೆಗೆ ಉಪಕಸುಬುಗಳು ಲಾಭದಾಯಕವಾಗಿವೆ.

ಡಾ. ಚಿದಾನಂದ ಮನ್ನೂರ ವಿಶ್ರಾಂತ ಡೀನ್, ವ್ಯವಸ್ಥಾಪನ ಮಂಡಳಿ ಸದಸ್ಯರು, ಕೃಷಿ ವಿವಿ ಧಾರವಾಡ

ಮೇವು ಬೀಜೋತ್ಪಾದನೆ

ಧಾರವಾಡದಲ್ಲಿರುವ ಭಾರತೀಯ ಹುಲ್ಲುಗಾವಲು ಸಂಸ್ಥೆಯಿಂದ (ಐಜಿಎಫ್ಆರ್ಐ) ಕುದುರೆ ಮೆಂತ್ಯ, ಬಹುವಾರ್ಷಿಕ ಮೇವಿನ ಜೋಳ ಹಾಗೂ ಬೇಲಿ ಮೆಂತ್ಯಗಳ ಬೀಜದ ಪ್ಯಾಕೆಟ್‌ಗಳನ್ನು ತಲಾ ಒಂದು ಕೆಜಿಯಂತೆ ಖರೀದಿಸಲಾಗಿತ್ತು. ತಮಗೆ ಸಾಕಾಗುವಷ್ಟು ಮೇವು ಇಟ್ಟುಕೊಂಡು, ಇನ್ನುಳಿದ ಮೇವನ್ನು ಬೀಜವಾಗುವವರೆಗೆ ಬೆಳೆಸಿ, ಅದೇ ಬೀಜಗಳನ್ನು ಮರಳಿ ಹುಲ್ಲುಗಾವಲು ಸಂಸ್ಥೆಗೆ ಮಾರಾಟ ಮಾಡುತ್ತೇವೆ ಎನ್ನುತ್ತಾರೆ ಮಂಜುನಾಥ.

ಮಳೆ ನೀರು ಕೊಯ್ಲು: ಕುರಿ ಸಾಕಾಣಿಕೆಯ ಶೆಡ್ ಮೇಲೆ ಬೀಳುವ ನೀರನ್ನು ಕೃಷಿ ಹೊಂಡದಲ್ಲಿ ಸಂಗ್ರಹಿಸಿ, ಬೋರ್‌ವೆಲ್ ಇರುವ ಕಡೆ ಮಳೆ ನೀರಿನ ಸಂಗ್ರಹ ಮಾಡಲಾಗುತ್ತಿದೆ. ಸೋಲಾರ್ ವ್ಯವಸ್ಥೆ ಆಳವಡಿಸಿಕೊಂಡಿದ್ದು, ಸೌರ ವಿದ್ಯುತ್ ನಿಂದಲೇ ಕುರಿ ಶೆಡ್‌ಗೆ ಬೆಳಕಿನ ವ್ಯವಸ್ಥೆ ಮಾಡಿದ್ದಾರೆ.



ಔಷಧೋಪಚಾರ ಹೇಗೆ?

ಪ್ರತಿ 3 ತಿಂಗಳಿಗೊಮ್ಮೆ ಎಲ್ಲ ಕುರಿಗಳಿಗೆ ಜಂತು ಹುಳು ಔಷಧ ನೀಡಲಾಗುವುದು. ಕರುಳು ಬೇನೆ, ಬಾಯಿ ಬೇನೆ, ನೀಲಿ ನಾಲಿಗೆ ರೋಗ, ಹೃದಯಸಂಬಂಧಿ ಕಾಯಿಲೆಗಳು ಬರದಂತೆ ತಡೆಯಲು ಮುಂಜಾಗ್ರತಾ ಕ್ರಮವಾಗಿ ವರ್ಷದಲ್ಲಿ 4 ಬಾರಿ ವ್ಯಾಕ್ಸಿನ್ ನೀಡಲಾಗುತ್ತದೆ.

6 ಬಗೆಯ ಮೇವು

4 ಎಕರೆಯಲ್ಲಿ ಕುರಿಗಳಿಗಾಗಿ ಸೂಪರ್ ನೇಪಿಯರ್, ಸಿಒಎಫ್ -31 ಬಹುವಾರ್ಷಿಕ ಮೇವಿನ ಜೋಳ, ಕುದುರೆ ಮೆಂತ್ಯ, ಬೇಲಿ ಮೆಂತ್ಯ, ಮೇವಿನ ಅಲಸಂದೆ, ಗೋವಿನಜೋಳ ಸೇರಿ 6 ಬಗೆಯ ಮೇವು ಬೆಳೆಯಲಾಗುತ್ತದೆ. ಹಸಿ ಮೇವನ್ನು ಯಂತ್ರದ ಮೂಲಕ 1 ಇಂಚಿನಷ್ಟು ಕತ್ತರಿಸಿ ಮಾಡಿ ದಿನಕ್ಕೆ 5 ಬಾರಿ, ಬೆಳಗ್ಗೆ 1 ಬಾರಿ ಹೊಟ್ಟು, ಮೇವನ್ನು ಕುರಿಗಳಿಗೆ ಆಹಾರವಾಗಿ ನೀಡಲಾಗುತ್ತದೆ.

ಹೋಮಕ್ಕೆ ಬೆರಣಿ ಬಳಕೆ

ಹೋಮಕ್ಕೆ ಜವಾರಿ ಆಕಳ ಸಗಣಿಯಿಂದ ಬೆರಣಿ ತಯಾರಿಸಿ ಕೊಡುವಂತೆ ಗ್ರಾಹಕರಿಂದ ಬೇಡಿಕೆ ಬಂದಿದೆ. 1 ಬೆರಣಿಗೆ 5 ರೂ. ನೀಡಿ ಖರೀದಿಸುವುದಾಗಿ ಗ್ರಾಹಕರು ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಆಕಳ ಸಗಣಿಯಿಂದ ಬೆರಣಿ (ಕುಳ್ಳು) ಮಾಡಿ ಮಾರಾಟ ಮಾಡುವ ಯೋಜನೆ ಹಾಕಿಕೊಂಡಿದ್ದಾರೆ.

ವಿಜಯವಾಣಿ ನಂ.1 ಕನ್ನಡ ದಿನಪತ್ರಿಕೆ



ಜೇನು ಕೃಷಿ ಲಾಭದ ವಿಜಯ

ಪರಾಗ ಸ್ಪರ್ಶಕ್ಕೆ ಜೇನುಪೆಟ್ಟಿಗೆ ಬಾಡಿಗೆ ನೀಡುವ ಯುವರೈತ

ಆನಂದ ಭಮ್ಮನ್ನವರ ಚಿಕ್ಕೋಡಿ

ವೈಜ್ಞಾನಿಕ ಕೃಷಿ ಪದ್ಧತಿಗಳು ಮರೆಯಾಗುತ್ತಿರುವ ಬೆನ್ನಲ್ಲೇ ಬೆಳಗಾವಿ ಜಿಲ್ಲೆ ರಾಯಬಾಗ ತಾಲೂಕು ಸಿದ್ದಾಪುರ ಗ್ರಾಮದ ಯುವ ರೈತ ವಿಜಯ್ ಪಾಟೀಲ, ಜೇನು ಉತ್ಪಾದನೆ ಜತೆಗೆ ಪರಾಗಸ್ಪರ್ಶದ ಮೂಲಕ ಹೆಚ್ಚುವರಿ ಲಾಭ ಪಡೆಯುವ ಮಾರ್ಗ ಕಂಡುಕೊಂಡಿದ್ದಾರೆ.

ತೋಟಗಾರಿಕೆ ಇಲಾಖೆ ಮಾರ್ಗದರ್ಶನದಲ್ಲಿ ಕೆಲ ಪ್ರದೇಶಗಳಿಗೆ ಭೇಟಿ ನೀಡಿ ಅನುಭವ ಪಡೆದ ವಿಜಯ್, ಬಳಿಕ ತನ್ನ ಜಮೀನಿನಲ್ಲಿ ಪ್ರಾಯೋಗಿಕವಾಗಿ ಐದು ಜೇನು ಪೆಟ್ಟಿಗೆ ಆಳವಡಿಸಿದರು. ಇದರಲ್ಲಿ ಹೆಚ್ಚುವರಿ ಇಳುವರಿ ಸಿಕ್ಕಿದ್ದರಿಂದ ಪ್ರೇರಣೆಗೊಂಡು 150 ಪೆಟ್ಟಿಗೆಗಳ ಮೂಲಕ ಜೇನು ಉತ್ಪಾದಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ವೈಜ್ಞಾನಿಕವಾಗಿ ಸಾಸಿವೆ, ಸೌತೆಕಾಯಿ, ಮಾವು, ಕಲ್ಲಂಗಡಿ, ಸೂರ್ಯಕಾಂತಿ ಸೇರಿ ಹೂ ಬಿಟ್ಟು ಫಲ ಕೊಡುವ ಬೆಳೆಗಳಿಗೆ ಪರಾಗಸ್ಪರ್ಶದಿಂದ ಶೇ.15ರಿಂದ ಶೇ.75 ಹೆಚ್ಚುವರಿ ಇಳುವರಿ ಪಡೆಯಬಹುದೆಂಬ ವೈಜ್ಞಾನಿಕವಾಗಿ ಸಾಬೀತಾಗಿದೆ. ಇದನ್ನೇ ಬಂಡವಾಳವಾಗಿಸಿಕೊಂಡ ಯುವಕ, ಜೇನು ಪೆಟ್ಟಿಗೆಗಳನ್ನು ದಿನದ ರೂಪದಲ್ಲಿ ಬಾಡಿಗೆ ನೀಡಿ ಪರ್ಯಾಯ ಆದಾಯ ಕೂಡ ಪಡೆಯುತ್ತಿದ್ದಾರೆ. ಕರ್ನಾಟಕ ಮತ್ತಿವಲ್ಲದೆ ಮಹಾರಾಷ್ಟ್ರದ ಗಡಿ ಭಾಗದ ರೈತರು ಸಹ ಜೇನು ಪೆಟ್ಟಿಗೆಗಳನ್ನು ಬಾಡಿಗೆಗೆ ಪಡೆಯುತ್ತಿದ್ದಾರೆ.

ಪ್ಯಾರಂಭದಲ್ಲಿ ಜೇನು ಕೃಷಿಗಾಗಿ 30 ಸಾವಿರ ರೂ. ಬಂಡವಾಳವನ್ನಷ್ಟೇ ವಿಜಯ್ ಪಾಟೀಲ ಹೂಡಿಕೆ ಮಾಡಿದ್ದರು. ನಂತರ ಕೇರಳದಿಂದ ತುಡುವೆ ತಳಿಯ ಜೇನು ನೊಣಗಳ ಪೆಟ್ಟಿಗೆ ತಂದು ಹಂತ ಹಂತವಾಗಿ ಬೆಳೆದು ಸದ್ಯ 9 ಲಕ್ಷ ರೂ. ಬಂಡವಾಳದ ಕೃಷಿ ಆರಂಭಿಸಿದ್ದಾರೆ. ತಾವೇ ಸುಜಾತ ಆರ್ಯಾನಿಕ್ ಫಾರ್ಮ್ ಸ್ಥಾಪಿಸಿ, ಜೇನು ತಯಾರಿಕೆ ಜತೆಗೆ ಪರಿಣಾಸ್ಪರ್ಶದಿಂದ ಬರುವ ಬಾಡಿಗೆ ರೂಪದ ಹಣ ಸೇರಿ ತಿಂಗಳಿಗೆ 1 ಲಕ್ಷ ರೂ. ಆದಾಯ ಪಡೆಯುತ್ತಿದ್ದಾರೆ.



ಸೆಹೋರ ಸಿದ್ದನಗೌಡ ಪಾಟೀಲ ಹಾಗೂ ಅಥಣಿ ತೋಟಗಾರಿಕೆ ಇಲಾಖೆ ಅಧಿಕಾರಿ ಕರಿಗೌಡ ಜಟ್ಟಿಗಿ ಮಾರ್ಗದರ್ಶನ ತುಂಬಾ ಉಪಯುಕ್ತವಾಯಿತು. ಈ ವೈಜ್ಞಾನಿಕ ಪರಾಗಸ್ಪರ್ಶ ಪದ್ಧತಿ ನನಗೆ ಮಾತ್ರವಲ್ಲ, ಇಡೀ ರೈತ ಕುಲಕ್ಕೆ ಪ್ರೇರಣೆಯಾಗಿದೆ.

ವಿಜಯ್ ಪಾಟೀಲ
ಜೇನು ಕೃಷಿಕ, ಸಿದ್ದಾಪುರ



ರಾಯಬಾಗ ತಾಲೂಕಿನ ಸಿದ್ದಾಪುರದ ರೈತ ವಿಜಯ್ ಪಾಟೀಲ ಬಾಡಿಗೆ ನೀಡುವ ಜೇನು ಪೆಟ್ಟಿಗೆಗಳು.

ಚೆಟ್ಟಳ್ಳಿ ಕಾಫಿ ಸಂಶೋಧನಾ ಕೇಂದ್ರದಲ್ಲಿ ಟಿಶ್ಯೂ ಕಲ್ಚರ್ ಸಂಶೋಧನೆ | ಬೀಜಗಳ ಅವಲಂಬನೆಗೆ ತಿಲಾಂಜಲಿ

ಜೈವಿಕ ತಂತ್ರಜ್ಞಾನದಿಂದ ಕಾಫಿ ತಳಿ ಅಭಿವೃದ್ಧಿ

■ ಜಗದೀಶ್ ಜೋಡುಬೀಟಿ ಗೋಣಿಕೊಪ್ಪ (ಕೊಡಗು)
jagadishjodubeeti@gmail.com

ಜೈವಿಕ ತಂತ್ರಜ್ಞಾನದಿಂದ ಕಾಫಿ ತಳಿಯ ಅಭಿವೃದ್ಧಿಗೆ ಕೊಡಗಿನ ಚೆಟ್ಟಳ್ಳಿ ಕಾಫಿ ಸಂಶೋಧನಾ ಕೇಂದ್ರ ಟಿಶ್ಯೂ ಕಲ್ಚರ್ ಸಂಶೋಧನೆಯ ಮೂಲಕ ಹೊಸ ಪ್ರಯೋಗ ಮಾಡಿದೆ. ಕಾಫಿ ತಳಗಳ ಅಭಿವೃದ್ಧಿಗೆ ಈ ಹಿಂದೆ ಇದ್ದ ಬೀಜಗಳ ಅವಲಂಬನೆಗೆ ಬದಲು ಒಂದು ಎಲೆಯಿಂದ ಸಾವಿರಾರು ಕಾಫಿ ಗಿಡಗಳನ್ನು ಉತ್ಪಾದಿಸುವ ಅಚ್ಚರಿಯನ್ನು ಅವಿಷ್ಕರಿಸಿದೆ.

ಹವಾಮಾನ ಬದಲಾವಣೆ, ಹೆಚ್ಚುತ್ತಿರುವ ತಾಪಮಾನ, ಅನಿಯಮಿತ ಮಳೆ, ಹೊಸ ರೋಗಗಳು ಹಾಗೂ ಕೀಟಗಳ ಹಾವಳಿ ಮತ್ತು ಇಳಿಮುಖವಾಗುತ್ತಿರುವ ಉತ್ಪಾದನೆ ಕಾಫಿ ಬೆಳೆಗಾರರಿಗೆ ಸವಾಲಾಗಿ ಪರಿಣಮಿಸಿದೆ. ಸಾಂಪ್ರದಾಯಿಕ ವಿಧಾನಗಳಲ್ಲಿ ಗುಣಮಟ್ಟದ ಸಸಿಗಳ ಲಭ್ಯತೆ ಸೀಮಿತವಾಗಿರುವ ಕಾರಣ ಹೆಚ್ಚು ಇಳುವರಿ ನೀಡುವ, ರೋಗ ನಿರೋಧಕ ಮತ್ತು ಹವಾಮಾನ ವೈಪರೀತ್ಯಗಳನ್ನು ತಡೆದುಕೊಳ್ಳಬಲ್ಲ ಹೊಸ ಕಾಫಿ ತಳಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ವಿಜ್ಞಾನಿಗಳು ಮಾಡಿದ್ದಾರೆ.

ಈ ಯೋಜನೆಯನ್ನು ಮೊದಲಿಗೆ ಮೈಸೂರಿನ ಕಾಫಿ ಮಂಡಳಿ ಕೇಂದ್ರದಲ್ಲಿ ಆರಂಭಿಸಲಾಗಿತ್ತು. ಅಲ್ಲಿನ ಯಶಸ್ವಿ ಫಲಿತಾಂಶಗಳ ಹಿನ್ನೆಲೆಯಲ್ಲಿ 2025ರ ಮಾರ್ಚ್‌ನಲ್ಲಿ ಚೆಟ್ಟಳ್ಳಿಗೆ ಸಂಶೋಧನೆ ಸ್ಥಳಾಂತರಿತವಾಯಿತು. ಇಲ್ಲಿ ಅತ್ಯಾಧುನಿಕ ಪ್ರಯೋಗಾಲಯಗಳು, ನಿಯಂತ್ರಿತ ತಾಪಮಾನ ವ್ಯವಸ್ಥೆಗಳು ಹಾಗೂ ಸಸ್ಯ ಬೆಳವಣಿಗೆ ಕೊಠಡಿಗಳನ್ನು ಸ್ಥಾಪಿಸಿ ಸಂಶೋಧನೆಗೆ ಪೂರಕವಾದ ವಾತಾವರಣ ನಿರ್ಮಿಸಲಾಗಿದೆ.



ಕಾಫಿ ತಳಿಗಳ ಅಭಿವೃದ್ಧಿ ಚೆಟ್ಟಳ್ಳಿ ಉಪಕೇಂದ್ರ ಟಿಶ್ಯೂ ಕಲ್ಚರ್ ಪ್ರಯೋಗಕ್ಕೆ ಮುಂದಾಗಿರುವುದು.

ಏನಿದು ಟಿಶ್ಯೂ ಕಲ್ಚರ್?

ಟಿಶ್ಯೂ ಕಲ್ಚರ್ ಸಸ್ಯದ ಒಂದು ಸಣ್ಣ ಜೀವಂತ ಭಾಗವಾದ ಎಲೆ, ಕಾಂಡ ಅಥವಾ ಮೊಗ್ಗನ್ನು ಸಂಪೂರ್ಣ ನೈರ್ಮಲ್ಯಯುತ ಪ್ರಯೋಗಾಲಯ ಪರಿಸರದಲ್ಲಿ ಪೋಷಕಾಂಶಯುಕ್ತ ಮಾಧ್ಯಮದಲ್ಲಿ ಬೆಳೆಸುವ ವೈಜ್ಞಾನಿಕ ವಿಧಾನವಾಗಿದೆ. ಈ ಕೋಶಗಳು ಕ್ರಮೇಣ ವೃದ್ಧಿಹೊಂದಿ ಸಂಪೂರ್ಣ ಗಿಡಗಳಾಗಿ ರೂಪುಗೊಳ್ಳುತ್ತವೆ.

ಬೀಜದಿಂದ ಬೆಳೆದ ಗಿಡಗಳಲ್ಲಿ ಗುಣಲಕ್ಷಣಗಳಲ್ಲಿ ವ್ಯತ್ಯಾಸ ಕಂಡುಬರುವ ಸಾಧ್ಯತೆ ಇದ್ದರೂ, ಟಿಶ್ಯೂ ಕಲ್ಚರ್ ಮೂಲಕ ಉತ್ಪಾದನೆಯಾಗುವ ಗಿಡಗಳು ತಾಯಿ ಗಿಡದ ಎಲ್ಲಾ ಉತ್ತಮ ಗುಣಗಳನ್ನು ಉಳಿಸಿಕೊಳ್ಳುತ್ತವೆ. ಇದರಿಂದ ಸಮಾನ ಬೆಳವಣಿಗೆ, ಉತ್ತಮ ಇಳುವರಿ, ಉತ್ತಮ ಗುಣಮಟ್ಟದ ಕಾಫಿ ಬೀಜಗಳು ಹಾಗೂ ರೋಗ ನಿರೋಧಕ ಶಕ್ತಿ ದೊರೆಯುತ್ತದೆ.

ಸಂಶೋಧನೆಯ ಜತೆಗೆ ಚೆಟ್ಟಳ್ಳಿ ಕೇಂದ್ರವು ಜೈವಿಕ ತಂತ್ರಜ್ಞಾನ ವಿದ್ಯಾರ್ಥಿಗಳಿಗೆ ತರಬೇತಿ ಹಾಗೂ ಇಂಟರ್ನ್‌ಶಿಪ್ ಕಾರ್ಯಕ್ರಮಗಳನ್ನೂ ನಡೆಸುತ್ತಿದೆ.



-ಪುತ್ತರಿರ ಕರುಣ್ ಕಾಳಯ್ಯ
ಕೃಷಿಕ, ಚೆಟ್ಟಳ್ಳಿ

ಟಿಶ್ಯೂ ಕಲ್ಚರ್ ಮೂಲಕ ಬೆಳೆಸಲಾದ ಕಾಫಿ ಸಸಿಗಳನ್ನು ಆಯ್ದ ಬೆಳೆಗಾರರು ಹಾಗೂ ಕಾಫಿ ಮಂಡಳಿಯ ವಿವಿಧ ಘಟಕಗಳಿಗೆ ಪ್ರಾಯೋಗಿಕವಾಗಿ ವಿತರಿಸಲಾಗಿದ್ದು, ಅವುಗಳ ಬೆಳವಣಿಗೆ, ಇಳುವರಿ ಸಾಮರ್ಥ್ಯ ಮತ್ತು ರೋಗ ನಿರೋಧಕತೆಯನ್ನು ವಿವಿಧ ಪರಿಸರಗಳಲ್ಲಿ ಪರೀಕ್ಷಿಸಲಾಗುತ್ತಿದೆ.



-ಡಾ.ಸಿ.ಬಾಬು ಮುಖ್ಯಸ್ಥ ಕಾಫಿ ಉಪ ಸಂಶೋಧನಾ ಕೇಂದ್ರ, ಚೆಟ್ಟಳ್ಳಿ

ಕೊಡಗು ಸೇರಿದಂತೆ ಭಾರತದ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಅತಿಯಾದ ಮಳೆ, ಹೆಚ್ಚುತ್ತಿರುವ ಉಷ್ಣಾಂಶ ಮತ್ತು ಹೊಸ ಕೀಟ, ರೋಗಗಳ ಪರಿಣಾಮ ಹೆಚ್ಚುತ್ತಿರುವುದರಿಂದ, ಇವುಗಳನ್ನು ಎದುರಿಸಬಲ್ಲ ಆರೋಬಿಕಾ ಮತ್ತು ರೋಬಸ್ಟಾ ತಳಗಳ ಅಭಿವೃದ್

C'garh to create farmers' carbon credit network

EJAZ KAISER @ Raipur

IN a pioneering move toward climate-resilient farming, the Dhamtari district administration has inked a strategic partnership with PRITHU, a leading climate-technology organisation, to establish it as Chhattisgarh's first Model Carbon Agriculture district.

The Memorandum of Understanding (MoU), besides an environmental pledge, is projected as a massive economic game-changer. Over its life cycle, the initiative is estimated to pump a staggering ₹250 crore in additional income directly into the pockets of local farmers through the generation of international carbon credits.

The roadmap rolls out two interconnected projects designed to heal the soil while safeguarding natural resources. The first is Soil Organic Carbon (SOC) enhancement project to revitalise approximately 80,000 hectares of farmland across two distinct phases, focusing on trapping carbon in the earth to boost soil fertility and water retention. And secondly, Alternate Wetting and Drying (AWD) paddy project: spanning 30,000 hectares, this scientific technique shifts away from constant flooding to controlled water intervals in paddy fields, dramatically cutting down water waste and slashing harmful methane emissions without hurting crop yields.

PRITHU is backing this vision with an immediate ₹5 crore investment over the next three years. Rather than just dropping technology into fields, this funding will anchor extensive farmer capacity building, fuel exchange programmes, and spearhead specialised skill development to create green-collar jobs for rural youth.

Dhamtari has a proud legacy of leading where others follow. "This carbon-smart shift will unlock unprecedented financial avenues for local growers while actively fulfilling global sustainable development goals," said Abinash Mishra, district collector.

"The move is to create a self-sustaining ecosystem where farmers thrive through healthier soil, water conservation, and reliable secondary streams of income. We are confident Dhamtari will soon stand as a national blueprint for climate finance," said Prabal Tomar, co-founder of PRITHU.

Deputy Director (Agriculture) Monesh Sahu said the regional department will provide hands-on scientific training to ensure farmers transition smoothly into this profitable new era of carbon-smart farming. Dhamtari's innovation-driven blueprint proves that eco-consciousness and agricultural profitability can walk hand-in-hand and will do more than just transform local fields, officials in Dhamtari said.

According to Dhamtari Collector Mishra, the objective is to create sustainable opportunities for farmers.

Strategic partnership inked with PRITHU, a climate-tech firm

Move will establish state's first model carbon agriculture dist



Balanced development

Initiative to pump ₹250-cr income into local farmers' pockets

First project will revitalise 80,000 hectares of farmland across two phases

PRITHU IS BACKING THIS VISION WITH AN IMMEDIATE ₹5 CRORE INVESTMENT OVER 3 YRS

Second project will ensure controlled water intervals in paddy fields

Ind Exp pg 09

ಶಿರಗಾಂವ ಪಾಲಿಹೌಸ್ ವೀಳ್ಯದೆಲೆ ಕೃಷಿ ಕಥೆ

• ಚಿತ್ರ-ಬರಹ: ಇಮಾಮ್‌ಹುಸೇನ್ ಗೂಡುನವರ

ಗುರುವಾರದ ಸಂಜೆ. ಚಿಕ್ಕೋಡಿಯ ಶಿರಗಾಂವಕ್ಕೆ ತಲುಪಿದಾಗ ಗ್ರಾಮ ಪಂಚಾಯಿತಿ ಮಾರುಕಟ್ಟೆಯ ಸುತ್ತಮುತ್ತ ದಟ್ಟಣೆ ಇತ್ತು. ಚಕ್ಕಡಿಗಳು, ಬೈಕ್‌ಗಳು, ಆಟೊರಿಕ್ಷಾಗಳು, ಟಂಟಂಗಳು ಒಂದರ ಹಿಂದೆ ಒಂದರಂತೆ ಬಂದು ನಿಲ್ಲಲಾರಂಭಿಸಿದವು. ಅವುಗಳಿಂದ ಒಪ್ಪವಾಗಿ ಜೋಡಿಸಿದ ವೀಳ್ಯದೆಲೆ ಕರಂಡಿಗಳು ಕೆಳಗಿಳಿದವು. ಕೆಲವೇ ಕ್ಷಣಗಳಲ್ಲಿ ರೈತರು, ದಲ್ಲಾಳಿಗಳು ಮತ್ತು ಖರೀದಿದಾರರು ಒಂದಡೆ ಸೇರಿದರು.

'₹800ಕ್ಕೆ ಒಂದು ಕರಂಡಿ...' ಎಂದು ದಲ್ಲಾಳಿಯೊಬ್ಬ ಕೂಗುತ್ತಿದ್ದಂತೆ ಖರೀದಿದಾರರ ಧ್ವನಿಗಳೂ ಮೊಳಗಿದವು. ಕ್ಷಣಾರ್ಧದಲ್ಲೇ ಸವಾಲ್ ಜೋರಾಯಿತು. ಕೊನೆಗೆ ಹೆಚ್ಚಿನ ದರ ಕೂಗಿದವರು ಕರಂಡಿಗಳನ್ನು ಕೊಂಡೊಯ್ದರು. ಇದೇ ವೇಳೆ ಊರಿನ ಇನ್ನೆರಡು ಸ್ಥಳಗಳಲ್ಲಿಯೂ ಇಂಥದ್ದೇ ಸಂತೆ ನಡೆಯುತ್ತಿತ್ತು.

'ಒಂದೇ ಊರಲ್ಲಿ ಮೂರು ಕಡೆ ಏಕಕಾಲಕ್ಕೆ ಸಂತೆ ಏಕೆ?' ಎಂಬ ಪ್ರಶ್ನೆಗೆ ಸ್ಥಳೀಯ ಗೆಳೆಯ ಲಗಮಣ್ಣ ಉತ್ತರ ನೀಡಿದರು.

'ಕುಸ್ಗಿ ಹೆಸರಾದ ಈ ಊರು ವೀಳ್ಯದೆಲೆ ಕೃಷಿಗೂ ಪ್ರಸಿದ್ಧ. ಪಾಲಿಹೌಸ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ವೀಳ್ಯದೆಲೆ ಬೆಳೆಯುವುದರಿಂದ ವಾರದಲ್ಲಿ ಮೂರು ದಿನ ಸಂತೆ ನಡೆಯುತ್ತದೆ' ಎಂದರು.

ಆ ಉತ್ತರ ಕೇಳಿದ ಕೂಡಲೇ ವೀಳ್ಯದೆಲೆ ತೋಟಗಳನ್ನು ನೋಡಬೇಕೆಂಬ ಆಸೆ ಮೂಡಿತು. ಚಿಕ್ಕೋಡಿ-ಇಚಲಕರಂಜಿ ರಸ್ತೆಯಲ್ಲಿ ಹೊರಟಾಗ ಒಂದರ ಹಿಂದೆ ಒಂದರಂತೆ ಪಾಲಿಹೌಸ್‌ಗಳು ಕಣ್ಣಿಗೆ ಬಿದ್ದವು. ಕೆಲವು ಕಡೆ ಬಯಲಿನಲ್ಲಿಯೂ ವೀಳ್ಯದೆಲೆ ಬೆಳೆದಿತ್ತು. ಆದರೆ ಶಿರಗಾಂವದ ಹೊಸ ಗುರುತಾಗಿ ನಿಂತಿದ್ದು ಈ ಪಾಲಿಹೌಸ್‌ಗಳೇ.

ಕಬ್ಬು, ಶೇಂಗಾ, ತಂಬಾಕು, ನುಗ್ಗೆಕಾಯಿ... ಈ ಭಾಗದ ರೈತರು ಹಲವು ಬೆಳೆಗಳನ್ನು ಬೆಳೆಯುತ್ತಾರೆ. ಆದರೆ ಅವರ ಬದುಕಿಗೆ ಹೊಸ ದಿಕ್ಕು ತೋರಿಸಿದ್ದು ವೀಳ್ಯದೆಲೆ.

ಶಿರಗಾಂವದಲ್ಲಿ ವೀಳ್ಯದೆಲೆ ಕೃಷಿ ಹೊಸದೇನಲ್ಲ. ತಲೆತಲಾಂತರಗಳಿಂದ ರೈತರು ಈ ಬೆಳೆ ಬೆಳೆಯುತ್ತಿದ್ದಾರೆ. ಹಿಂದೆ ಬಯಲು ಪ್ರದೇಶಕ್ಕೆ ಸೀಮಿತವಾಗಿದ್ದ ಈ ಕೃಷಿ ಇಂದು ಪಾಲಿಹೌಸ್‌ಗಳಿಗೆ ವರ್ಗಾವಣೆಯಾಗಿದೆ.

ಬಯಲಿನಲ್ಲಿ ಬೆಳೆಯುವಾಗ ಮಳೆ, ಗಾಳಿ, ಅತಿವೃಷ್ಟಿ, ಬರ- ಯಾವುದೇ ಪ್ರಕೃತಿ ವೈಪರೀತ್ಯ ಬಂದರೂ ಬೆಳೆ ಹಾನಿಯಾಗುತ್ತಿತ್ತು. ಇಳುವರಿಯೂ ಕಡಿಮೆಯಾಗುತ್ತಿತ್ತು. ಆದರೆ ಪಾಲಿಹೌಸ್‌ನಲ್ಲಿ ನಿಯಂತ್ರಿತ ವಾತಾವರಣ ಮತ್ತು ಹನಿ ನೀರಾವರಿಯಿಂದ ಉತ್ಪಾದನೆ ಹೆಚ್ಚಿದ್ದು, ಆದಾಯವೂ ಹೆಚ್ಚಾಗಿದೆ.

2017ರಲ್ಲಿ ಊರಿನಲ್ಲಿ ಒಂದೇ ಒಂದು ಪಾಲಿಹೌಸ್ ಇತ್ತು. ಇಂದು ಅದರ ಸಂಖ್ಯೆ 50ರ ಗಡಿ ದಾಟಿದೆ.

ಈ ಬದಲಾವಣೆಯ ಹಿಂದಿನ ಕಥೆಯನ್ನು ರೈತ ಭೀಮಾ ಉದಗಟ್ಟಿ ನೆನಪಿಸಿಕೊಳ್ಳುತ್ತಾರೆ.

'2013ರಲ್ಲಿ ಹಂಚಿನಾಳಕ್ಕೆ ಹೋಗಿದ್ದಾಗ ಗೆಳೆಯನೊಬ್ಬ ಪಾಲಿಹೌಸ್‌ನಲ್ಲಿ ವೀಳ್ಯದೆಲೆ ಬೆಳೆದಿದ್ದ. ಅದೇ ಸ್ಫೂರ್ತಿ ನಾನೂ ಒಂದು ಎಲೆಬಳ್ಳಿ ಪ್ರತ್ಯೇಕವಾಗಿ ನೆಟ್ಟಿದ್ದೆ. ಅದು ಚೆನ್ನಾಗಿ ಬೆಳೆಯುವುದನ್ನು ಕಂಡಾಗ ಈ ಪದ್ಧತಿಯ ಸಾಮರ್ಥ್ಯ ಅರ್ಥವಾಯಿತು. ಅದೇ ಪ್ರೇರಣೆಯಿಂದ 2017ರಲ್ಲಿ ಶಿರಗಾಂವದಲ್ಲಿ ಮೊದಲ ಪಾಲಿಹೌಸ್ ನಿರ್ಮಿಸಿ ವೀಳ್ಯದೆಲೆ ಕೃಷಿ ಆರಂಭಿಸಿದೆ' ಎನ್ನುತ್ತಾರೆ.

'ನಮ್ಮ ಬಳಿ ಮೂರೂವರೆ ಎಕರೆ ಜಮೀನಿದೆ. ಹಿಂದೆ ಕಬ್ಬು, ತಂಬಾಕು ಸೇರಿದಂತೆ ಹಲವು ಬೆಳೆಗಳನ್ನು ಬೆಳೆಯುತ್ತಿದ್ದೆವು. ಬಯಲಿನಲ್ಲಿ ಒಂದು ಎಕರೆ ವೀಳ್ಯದೆಲೆಯಿಂದ ವರ್ಷಕ್ಕೆ ನಾಲ್ಕು ಲಕ್ಷ ರೂಪಾಯಿ ಆದಾಯ ಸಿಗುತ್ತಿತ್ತು. ಆದರೆ ಪಾಲಿಹೌಸ್‌ನಲ್ಲಿ ಅದೇ ಜಮೀನಿನಿಂದ ಸುಮಾರು ಹದಿನೈದು ಲಕ್ಷ ರೂಪಾಯಿ ಆದಾಯ ಬರುತ್ತಿದೆ' ಎಂದು ಅವರು ಹೇಳುತ್ತಾರೆ.

'ಬೇರೆ ಬೆಳೆಗಳು ಜೀವನ ಸಾಗಿಸಲು ನೆರವಾಗಿವೆ. ಆದರೆ ಬದುಕಿಗೆ ನಿಜವಾದ ಹೊಳಪು ತಂದಿದ್ದು ವೀಳ್ಯದೆಲೆ ಕೃಷಿ. ಒಂದು ಎಕರೆಯಿಂದ ವರ್ಷಕ್ಕೆ ₹15 ಲಕ್ಷ ಆದಾಯ ಬಂದಾಗ ರೈತನ ಆತ್ಮವಿಶ್ವಾಸವೇ ಬದಲಾಗುತ್ತದೆ' ಎನ್ನುತ್ತಾರೆ ರೈತ ಅಪ್ಪಾಸಾಹೇಬ ಉದಗಟ್ಟಿ.



ವೀಳ್ಯದೆಲೆ ಕೃಷಿ ಲಾಭದಾಯಕ ಎನ್ನುವುದು ಸತ್ಯ. ಆದರೆ ಅಷ್ಟೇ ಶ್ರಮದಾಯಕವೂ ಹೌದು. ಒಂದು ಎಕರೆ ಪಾಲಿಹೌಸ್ ನಿರ್ವಹಣೆಗೆ ಎಂಟು ಮಂದಿ ಕಾರ್ಮಿಕರು ಬೇಕಾಗುತ್ತಾರೆ. ಬಳ್ಳಿ ಕಟ್ಟುವುದು, ಎಲೆ ಕತ್ತರಿಸುವುದು, ಗೊಬ್ಬರ ಹಾಕುವುದು, ನೀರುಣಿಸುವುದು ಸೇರಿದಂತೆ ಪ್ರತಿಯೊಂದು ಕೆಲಸಕ್ಕೂ ಕೌಶಲ ಬೇಕು.

ಕಾರ್ಮಿಕರ ಕೊರತೆ ರೈತರನ್ನು ಕಾಡುತ್ತಿದೆ. ಕೆಲವೊಮ್ಮೆ ಇಡೀ ಕುಟುಂಬವೇ ಪಾಲಿಹೌಸ್‌ಗೆ ಇಳಿದು ಕೆಲಸ ಮಾಡಬೇಕಾಗುತ್ತದೆ. 'ಬಾಲ್ಯದಿಂದಲೂ ವೀಳ್ಯದೆಲೆ ತೋಟಗಳಲ್ಲೇ ಕೆಲಸ ಮಾಡುತ್ತಿದ್ದೇವೆ. ಮೂರು ಸಾವಿರ ಎಲೆ ಕತ್ತರಿಸಿದರೆ ₹150 ಸಿಗುತ್ತದೆ. ಒಂದು ದಿನ ಬಳ್ಳಿ ಕಟ್ಟಿದರೆ ₹500 ಕೂಲಿ ಸಿಗುತ್ತದೆ. ನಮ್ಮ ಬದುಕಿಗೆ ಆಸರೆ ನೀಡಿರುವುದು ಈ ತೋಟಗಳೇ' ಎನ್ನುತ್ತಾರೆ ಕಾರ್ಮಿಕರಾದ ಸದಾಶಿವ ಪನ್ನಾಶೆ ಮತ್ತು ಮುನ್ನಾ ಶಿರಗುಪ್ಪಿ.

ವೀಳ್ಯದೆಲೆ ಬೆಳೆ ಸೂಕ್ಷ್ಮವಾದದ್ದು. ಪಾಲಿಹೌಸ್‌ನೊಳಗೆ ಸಾಲುಗಳ ಮಧ್ಯೆ 1.25 ಮೀಟರ್ ಅಂತರ ಹಾಗೂ ಪ್ರತಿ ಬಳ್ಳಿಯ ಮಧ್ಯೆ 0.3 ಮೀಟರ್ ಅಂತರ ಇರುತ್ತದೆ. ಬಯಲಿನಲ್ಲಿ ಚಗಚ ಮತ್ತು ನುಗ್ಗೆ ಮರಗಳ ಮೇಲೆ 15 ಅಡಿ ಎತ್ತರದವರೆಗೆ ಬಳ್ಳಿ ಬೆಳೆಯುತ್ತದೆ. ಪಾಲಿಹೌಸ್‌ನಲ್ಲಿ ದಿದಿರಿನ ಬಂಬುಗಳ ಮೇಲೆ 13.5 ಅಡಿ ಎತ್ತರದವರೆಗೆ ಬೆಳೆಸಲಾಗುತ್ತದೆ. ಬಯಲಿನಲ್ಲಿ ಏಳು ತಿಂಗಳ ನಂತರ ಕೊಯ್ಲಿಗೆ ಬರುವ ಬೆಳೆ, ಪಾಲಿಹೌಸ್‌ನಲ್ಲಿ 70 ದಿನಗಳಲ್ಲೇ ಕೊಯ್ಲಿಗೆ ಸಿದ್ಧವಾಗುತ್ತದೆ.

ವಾರದಲ್ಲಿ ಮೂರು ದಿನ ಸಂತೆ

ಶಿರಗಾಂವದಲ್ಲಿ ಪ್ರತಿ ಮಂಗಳವಾರ, ಗುರುವಾರ ಮತ್ತು ಭಾನುವಾರ ವೀಳ್ಯದೆಲೆ ಸಂತೆ ನಡೆಯುತ್ತದೆ. ಶಿರಗಾಂವದ ರೈತರಷ್ಟೇ ಅಲ್ಲ; ಖಡಕಲಾಟ, ನಾಗರಾಳ, ಗಳತಗಾ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರೂ ತಮ್ಮ ಉತ್ಪನ್ನವನ್ನು ಇಲ್ಲಿ ತರುತ್ತಾರೆ.

ಇಲ್ಲಿಂದ ಹೊರಡುವ ವೀಳ್ಯದೆಲೆಗಳು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಗೋವಾ, ಆಂಧ್ರಪ್ರದೇಶ ಮತ್ತು ತೆಲಂಗಾಣದ ಮಾರುಕಟ್ಟೆಗಳನ್ನು ತಲುಪುತ್ತವೆ.

ಇಲ್ಲಿ ಹೆಚ್ಚಾಗಿ ಬೆಳೆಯುವುದು ಮಧ್ಯಮ ಖಾರದ 'ಅಂಬಾಡಿ' ತಳಿ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಈ ತಳಿಯ ಎಲೆಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ವರ್ಷಪೂರ್ತಿ ಮಾರುಕಟ್ಟೆ ಇರುತ್ತದೆ.



ಶಿರಗಾಂವದಲ್ಲಿ ಪಾಲಿಹೌಸ್‌ನಲ್ಲಿ ಬೆಳೆದ ವೀಳ್ಯದೆಲೆ ಬಳ್ಳಿ

Prajavani pg 10

ಲಾಲ್‌ಬಾಗ್‌ನಲ್ಲಿ ಮಾವು ಮೇಳ: ಭರ್ಜರಿ ₹8 ಕೋಟಿ ವಹಿವಾಟು

27 ದಿನಗಳಲ್ಲಿ 700 ಟನ್‌ಗೂ ಅಧಿಕ ಮಾವು ಮಾರಾಟ

■ ಉದಯವಾಣಿ ಸಮಾಚಾರ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಆಯೋಜಿಸಿದ್ದ ಮಾವು-ಹಲಸು ಮೇಳಕ್ಕೆ ಸಾರ್ವಜನಿಕರಿಂದ ಭರ್ಜರಿ ಸ್ಪಂದನೆ ವ್ಯಕ್ತವಾಗಿದೆ. ಕಳೆದ 27 ದಿನಗಳಲ್ಲಿ 700 ಟನ್‌ಗೂ ಅಧಿಕ ವಿವಿಧ ತಳಿಯ ಮಾವಿನ ಹಣ್ಣಿನ ಮಾರಾಟವಾಗಿದ್ದು, ಇದರಿಂದಾಗಿ ಅಂದಾಜು 7 ರಿಂದ 8 ಕೋಟಿ ರೂ. ವಹಿವಾಟು ನಡೆದಿದೆ. ಮಾವು ಅಭಿವೃದ್ಧಿ ನಿಗಮವು ಜೂ.4 ರಿಂದ 27 ದಿನಗಳವರೆಗೆ ಲಾಲ್‌ಬಾಗ್ ಉದ್ಯಾನದಲ್ಲಿ ಬೃಹತ್ ಮಾವು-ಹಲಸು ಮೇಳವನ್ನು ಆಯೋಜಿಸಿತ್ತು. 180ಕ್ಕೂ ಹೆಚ್ಚು ಮಳಿಗೆ ತೆರೆಯಲು ಅವಕಾಶ ಕಲ್ಪಿಸಿತ್ತು.

ಈ ಕುರಿತು ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ ಅಧ್ಯಕ್ಷ ಬಿ.ಸಿ.ಮುದ್ದು ಗಂಗಾಧರ್ ಮಾತನಾಡಿ, ರೈತರಿಗೆ ಮಾರುಕಟ್ಟೆ ಒದಗಿಸುವ ಹಾಗೂ ಗ್ರಾಹಕರಿಗೆ ಕಾರ್ಬೈಡ್ ಮುಕ್ತವಾದ ಗುಣಮಟ್ಟದ ಸಾವಯವ ಮಾವಿನ ಹಣ್ಣುಗಳನ್ನು ಮಾರುಕಟ್ಟೆ ಬೆಲೆಗಿಂತ ಸಮಂಜಸ ಬೆಲೆಯಲ್ಲಿ ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಆಯೋಜಿಸಿದ್ದ ಮಾವು ಮೇಳವು ಯಶಸ್ವಿಯಾಗಿ ನೆರವೇರಿದೆ ಎಂದರು.

ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಾತನಾಡಿ, ಮಾವು ಮೇಳದಲ್ಲಿ ಯಾವುದೇ ಮಧ್ಯವರ್ತಿಗಳ ಹಾವಳಿಯಿಲ್ಲದೆ ನೇರ ಮಾರಾಟ ವ್ಯವಸ್ಥೆ ಕಲ್ಪಿಸಿರುವುದು ರೈತರು ಹಾಗೂ ಗ್ರಾಹಕರಿಬ್ಬರಿಗೂ ಅನುಕೂಲವಾಗಿದೆ. ಅಂದಾಜು 700 ಟನ್ ನಷ್ಟು ಮಾವು ಮಾರಾಟವಾಗಿದ್ದು ಇದರಲ್ಲಿ ಮಲ್ಲಿಕಾ, ದಶೇರಿ, ಮಲಗೋವಾ ಹಾಗೂ ಆಲ್ಫೋನ್ಸೋ ಹೆಚ್ಚಿನ ಪ್ರಮಾಣದಲ್ಲಿ ಗ್ರಾಹಕರು ಖರೀದಿಸಿದ್ದಾರೆ ಎಂದರು.

Udayavani pg 04

ಸಂಯುಕ್ತ ಕರ್ನಾಟಕ

ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಜಿಕೆವಿಕೆ, ನಗರ ಯೋಜನಾ ತಜ್ಞ ಎಂಜಿನಿಯರ್ ಎಸ್. ವಿಶ್ವನಾಥ್ ಹಾಗೂ ಮಾಜಿ ಕ್ರಿಕೆಟಿಗ ರಾಹುಲ್ ದ್ರಾವಿಡ್ ಅವರಿಗೆ ಸಿಎಂ ಡಿ.ಕೆ. ಶಿವಕುಮಾರ್ ಅವರು ಪ್ರಶಸ್ತಿ ಪ್ರದಾನ ಮಾಡಿದರು.



Jun 28, 2026 Page No. 03

Powered by: erelego.com